International Journal of Kannada Research
www.kannadajournal.com

ISSN: 2454–5813
IJKR 2021; 7(4): 102-108
© 2021 IJKR
www.kannadajournal.com
Received: 16-08-2021
Accepted: 18-09-2021

**ಡಾ.ಶಶಿಕುಮಾರ.ಎಸ್**
ಕ್ಯುರೇಟರ್ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ

Corresponding Author:
**ಡಾ.ಶಶಿಕುಮಾರ.ಎಸ್**
ಕ್ಯುರೇಟರ್ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ

# ಹಾಸನ ಜಿಲ್ಲೆಯ ಶಾಸನ ಸ್ಮಾರಕ ಶಿಲ್ಪಗಳ ಒಂದು ಸಾಂಸ್ಕೃತಿಕ ಅಧ್ಯಯನ

**ಡಾ.ಶಶಿಕುಮಾರ.ಎಸ್**

ಸ್ಮಾರಕ ಎಂಬ ಶಬ್ಧವೂ ಸ್ಮ (ಸ್ಮರಿಸು) ಎಂಬ ಧಾತುವಿನಿಂದ ಬಂದಿದೆ. ಯಾವುದೂ ಸ್ಮರಣೆಗೆ ಬರುವಂತೆ ಮಾಡಲ್ಪಡುತ್ತದೆಯೋ ಅದನ್ನು ಸ್ಮಾರಕ ಎನ್ನಬಹುದಾಗಿದೆ. ಅದೇ ರೀತಿಯಲ್ಲಿ ವ್ಯಕ್ತಿಯ ಮರಣಿಸಿದ ನಂತರ ಆತನ ಸ್ಮರಣೆಗಾಗಿ ನಿಗದಿಯಾದ ಸ್ಥಳದಲ್ಲಿ ನಿರ್ಮಿಸಿಲಾದ ಸಂಕೇತ ಅಥಾವ ಗುರುತಿನ ಸಾಧನಗಳನ್ನು ಸಹ ಸ್ಮಾರಕ ಎನ್ನಬಹುದು. ಇವು ಮಾನವನ ಬೆಳೆದು ಬಂದ ಹಾದಿಯಲ್ಲಿನ ಸಾಧನೆಯನ್ನು ತಿಳಿಸುವುದರ ಜೊತೆಗೆ ಆತನ ಜೀವನ ಶೈಲಿ ಮತ್ತು ಸಂಸ್ಕೃತಿಯನ್ನು ಸಹ ಹೊರ ಚೆಲ್ಲುತ್ತವೆ. ಈ ಸ್ಮಾರಕ ಶಿಲ್ಪಗಳ ವಿಧಗಳಲ್ಲಿ ನಮಗೆ ವೀರಗಲ್ಲುಗಳು, ಸತಿಗಲ್ಲುಗಳು, ನಿಸಧಿಗಲ್ಲುಗಳು, ಹೇರಳವಾಗಿ ದೊರೆಯುತ್ತವೆ.

ನಮ್ಮ ನಾಡಿನ ಮತ್ತು ಹೊರ ನಾಡಿನ ಎಲ್ಲಾ ಸ್ಮಾರಕ ಶಿಲ್ಪಗಳ ಪರಿವೀಕ್ಷಣಾ ಕಾರ್ಯ ಪೂರ್ಣವಾಗಿಲ್ಲಾ ಹಾಗೂ ಪರಿವೀಕ್ಷಿತ ಈ ಮರಣ ಸ್ಮಾರಕಗಳಲ್ಲಿ ಶಾಸನಗಳು ದೊರೆಯುವುದು ಸಹ ಕಡಿಮೆ. ಅದರೂ ಸಹ ಈ ಶಾಸನ ಉಲ್ಲೇಖಿತ ಸ್ಮಾರಕ ಶಿಲ್ಪಗಳಿಂದ ನಮಗೆ ವೀರನ ಮರಣದ ಕಾರಣ, ಆ ಕಾಲದ ರಾಜವಂಶ, ಸ್ಥಳೀಯ ಆಡಳಿತಾಧಿಕಾರಿಗಳು, ಬರೆದಂತಹ ಓಜ ಅದನ್ನು ಹಾಕಿಸಿದ ವ್ಯಕ್ತಿ ಹಾಗೂ ಆ ಸಂಧರ್ಭದಲ್ಲಿ ನೀಡಿದಂತಹ ಕೊಡುಗೆ, ಧಾನ ಅಥಾವ ದತ್ತಿಯ ಬಗ್ಗೆ ಮಾಹಿತಿಯನ್ನು ನಮಗೆ ಚಿತ್ರಣ ಮತ್ತು ಲಿಖಿತ ಶಾಸನದ ಮೂಲಕ ಅಂದಿನ ಸಮಾಜದ ಸಂಸ್ಕೃತಿಯಲ್ಲಿನ ನಡೆದಂತಹ ಘಟನೆಗಳಲ್ಲಿನ ಮಾಹಿತಿಯನ್ನು ಶಾಸನಗಳೇಷ್ಟೇ ರೀತಿಯಲ್ಲಿ ಒದಗಿಸುವ ಆಕರಗಳಾಗಿವೆ. ಅಲ್ಲದೇ ಶಾಸನಗಳ ಅಧ್ಯಯನ ಮಹತ್ವದಿಂದ ಪ್ರಮುಖವಾದ ರಾಜರು ಹಾಗೂ ವ್ಯಕ್ತಿಗಳು ಅದರಲ್ಲಿನ ರಾಜಕೀಯ ಅಂಶ, ಅರ್ಥಿಕತೆ, ದಾರ್ಮಿಕತೆ, ಸಾಂಸ್ಕೃತಿಕ ಮೇಲೇಷ್ವೇ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ ಎಂಬ ಅಭಿಪ್ರಾಯ ಪ್ರಮುಖವಾಗಿತ್ತು. ಅದರೆ ಅದೇ ಹಾದಿಯಲ್ಲಿ ಸ್ಥಳೀಯ ಹಳ್ಳಿಗಾಡಿನ ಜನರ ವೀರಗಾಥೆಯನ್ನು ತಿಳಿಸುವ ಸ್ಮಾರಕ ಶಿಲ್ಪಗಳ ಅಧ್ಯಯನ ಮಹತ್ವ ಪಡೆದಿಲ್ಲ ಎಂಬುವುದು ವಿಷಾಧನೀಯ ವಿಚಾರವಾಗಿದೆ. ಹಾಗೂ ಸ್ಮಾರಕ ಶಿಲ್ಪಗಳ ಜೊತೆಯಲ್ಲಿಯೇ ಶಾಸನವಿದ್ದಾಗ ನೈಜತೆಗೆ ಕೈಗನ್ನಡಿಯಿದ್ದಂತೆ, ಸ್ಥಳಿಯ ಚರಿತ್ರೆಯ ಸ್ಪಷ್ಟ ಚಿತ್ರಣ ಇವುಗಳು ನೀಡಿರುವುದುಈ ಕೆಳಗಿನ ಅಧ್ಯಯನದಿಂದ ತಿಳಿಯುತ್ತದೆ. ಹಾಗಾಗಿ ಶಾಸನ ಉಲ್ಲೇಖಿತ ಸ್ಮಾರಕ ಶಿಲ್ಪಗಳ ಕ್ರಮಾನುಗತ ಅಧ್ಯಯನವು ಈ ಲೇಖನದ ಉದ್ದೇಶವಾಗಿದೆ.

ಕರ್ನಾಟಕದ ಇತಿಹಾಸದಲ್ಲಿ ಹಾಸನ ಜಿಲ್ಲೆ ಒಂದು ವೈಶಿಷ್ಟವನ್ನು ಹೊಂದಿದೆ. ಈ ಜಿಲ್ಲೆಯು ಪ್ರಾಗೈತಿಹಾಸಿಕ ಕಾಲದ ಕುರುಹುಗಳೂಂದಿಗೆ ಪ್ರಾರಂಭವಾಗಿ ಇಂದಿನವರೆವಿಗೂ ವಿಭಿನ್ನ ಇತಿಹಾಸವನ್ನು ಕಾಣಬಹುದಾಗಿದೆ. ಬಹುಮುಖ್ಯವಾಗಿ

ಹೊಯ್ಸಳರ ರಾಜಕೀಯ ಕರ್ಮಭೂಮಿಯಾಗಿದ್ದ ಇಲ್ಲಿ ಇದಕ್ಕ ಸಂಭಂದಿಸದ ಅನೇಕ ದೇವಾಲಯಗಳು ಶಾಸನ, ಸ್ಮಾರಕ ಶಿಲ್ಪಗಳು ಅಪಾರವಾಗಿವೆ. ಈ ರೀತಿಯ ಕುರುಹುಗಳಿಗೆ ಸಂಬಂಧಿಸಿದಂತೆ ಹಾಸನ ಜಿಲ್ಲೆಯ ಕ್ಷೇತ್ರಕಾರ್ಯದಲ್ಲಿ ಗಮನಿಸಿದಾಗ ಶಾಸನ ಉಲ್ಲೇಖಿತ ಸ್ಮಾರಕ ಶಿಲ್ಪಗಳಗಿಂತ, ಶಾಸನರಹಿತ ಸ್ಮಾರಕಶಿಲ್ಪಗಳು ಅತಿ ಹೆಚ್ಚಾಗಿ ದೊರೆತಿವೆ. ಅದರೂ ಇವರೆಡರ ಉದ್ದೇಶವೂ ಸಹ ಒಂದೇ ಆಗಿದ್ದೂ ಯುದ್ದದಲ್ಲಿ ಹೋರಾಡಿದ ಗೋವುಗಳ ರಕ್ಷಣೆಗಾಗಿ, ಸ್ತ್ರೀಯರ ಮಾನ ಕಾಪಾಡುವುದಕ್ಕಾಗಿ, ಕೋಟೆ, ಗಡಿ ರಕ್ಷಣೆಯ ಕಾಳಗ ಮತ್ತು ಬೇಟೆಗಾರಿಕೆಯಲ್ಲಿ ಮಡಿದ ವೀರರನ್ನು ಅಮರರನ್ನಾಗಿ ಉಳಿಯುವಂತೆ ಮಾಡಲು ಈ ತರಹದ ಶಿಲೆಗಳನ್ನು ಹಾಕಿಸಿರುವುದು ಇದಲ್ಲದೇ ರಾಜ, ರಾಜನ ಮಡದಿ ಮರಣಿಸಿದಾಗ ಅವನ ಜೊತೆಯಲ್ಲಿಯೇ ಪ್ರಾಣ ತ್ಯಾಗ

ಮಾಡುತ್ತಿದ್ದವರಿಗೂ ಹಾಗೂ ರಾಜನ ಒಳತಿಗಾಗಿ ಆತ್ಮಾಹುತಿಯಾಗುತ್ತಿದ್ದವರಿಗೂ ವೀರಗಲ್ಲುಗಳನ್ನು ಹಾಕಿಸುತ್ತಿದ್ದದು ಕಂಡು ಬಂದಿವೆ. ಅದ್ದರಿಂದ ಹಾಸನ ಜಿಲ್ಲೆಯ ಶಾಸನ ಸ್ಮಾರಕ ಶಿಲ್ಪಗಳ ಸಾಂಸ್ಕೃತಿಕ ಅಧ್ಯಯನ ಮೂಲಕ ಈ ಕೆಳಕಂಡ ಲೇಖನ ವಿಚಾರಗಳ ಹೊರ ತರಲಾಗಿದೆ.

ಸ್ಮಾರಕ ವೀರಗಲ್ಲುಗಳನ್ನು ಸಾಂಸ್ಕೃತಿಕ ನೆಲೆಯಿಂದ ವಿಶ್ಲೇಷಿಸಿದಾಗ ವೀರಗಲ್ಲು ಪ್ರತಿನಿಧಿಸುವ ವೀರನ ಸಾವಿಗೆ ಕಾರಣವಾದ ಹೋರಾಟವನ್ನು ಪರಿಚಯಿಸಿ ಕೂಡುವುದರ ಜೊತೆಗೆ ಆತನ ಜೀವನ ಮೌಲ್ಯವನ್ನು ಅರಿಯುವಲ್ಲಿ ಸಹಕಾರಿಯಾಗಿವೆ. ಅನೇಕ ವೀರಗಲ್ಲುಗಳ ಶಾಸನದ ಅಂತ್ಯದಲ್ಲಿ ಸಂಸ್ಕೃತ ಶ್ಲೋಕವೊಂದು ಸಾಮಾನ್ಯವಾಗಿ ಕಾಣಿಸಿಕೊಂಡು ಅದು ವೀರನ ಮರಣಕ್ಕೆ ಸ್ಫೂರ್ತಿಯಂತೆ ಕಾಣಬಹುದಾಗಿದೆ.

"ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ.,"

ಅಂದರೇ ಪ್ರಾಚೀನ ಕನ್ನಡಿಗ ಯೋಧರ ಮನಸ್ಸಿನಲ್ಲಿ ಮನೆ ಮಾಡಿದ ಭಾವನೆಯಿದಾಗಿದ್ದು ಯುದ್ಧದಲ್ಲಿ ಗೆದ್ದರೇ ಲಕ್ಷ್ಮೀ ದೊರಕುವುಳು, ಸತ್ತರೇ (ಸ್ವರ್ಗದಲ್ಲಿ) ಸುರಾಂಗನೆಯರು ದೊರೆಕುವರು ದೇಹವೂ ಕ್ಷಣದಲ್ಲಿ ವಿಧ್ವಂಸವಾಗುವ ವಸ್ತುವಾದ್ದರಿಂದ ರಣರಂಗದಲ್ಲಿ ಮಡಿಯುವ ವಿಷಯದಲ್ಲಿ ಚಿಂತೆ ಏಕೆ? ಎಂಬುದಾಗಿದೆ. ಈ ರೀತಿಯ ಭಾವನೆಗಳು ಅಂದಿನ ವೀರರನ್ನು ಉತ್ತೇಜನಗೊಳಿಸಿ ರಣರಂಗದಲ್ಲಿ ಮುನ್ನುಗ್ಗಿ ಹೋರಾಡಲು ಇಲ್ಲವೆ ಸೋತು ರಣರಂಗದಲ್ಲಿ ಮಡಿಯಲು ಪ್ರೇರೇಪಿಸುತ್ತಿದ್ದವು. ವೀರ ಮರಣವನ್ನಪ್ಪಿದರೆ ಸ್ವರ್ಗದಲ್ಲಿ ಸುರಂಗನೆಯರು ದೊರಕುವರು ಎಂಬ ಪ್ರತೀಕವಾಗಿ ವೀರಗಲ್ಲುಗಳ ಮಧ್ಯದ ಹಂತದಲ್ಲಿ ಸುರಾಂಗನೆಯರು ವೀರನನ್ನು ಸ್ವರ್ಗಕ್ಕೆ ಕೊಂಡುಯ್ಯುವಂತೆ ಚಿತ್ರಿಸುತ್ತಿದ್ದದು ಇದ್ದಕ್ಕೆ ಸಾಕ್ಷಿಯಾಗಿವೆ.

ಹಾಗೇಯೇ ಪ್ರಾಚೀನ ಕಾಲದಲ್ಲಿದಂತಹ ವೀರ ಸಂಸ್ಕೃತಿಯ ವಿಧಗಳನ್ನು ರನ್ನ ಕವಿಯು ತನ್ನ ಗಧಾಯುದ್ಧ ಅಥಾವ ಸಾಹಸ ಭೀಮ ವಿಜಯ ಎಂಬ ಕಾವ್ಯದಲ್ಲಿ ಬರುವ ದ್ರೌಪದಿಯ ಮೂಲಕ ಈ ಕೆಳಕಂಡಂತೆ ವಿವರಿಸಿದ್ದಾನೆ.

**ತುರುಗೋಳೊಳ್ ಪೆಣ್ಬುಬಯ್ಯಲೊ**

1. ವಿವೆಸದೊಳ್ ನಂಟನೆಡೆ ಮಾಳ್ ಊರಳಿವಿನೊಳ್ /
2. ವಿ ಸೆಂದು ಗಂಡುತನ ಮನೆ
3. ವಿಪದವಂ ಗಂಡ ನಲ್ಲಿನೆಂತುಲ ಷಂಡಂ/

ಅಂದರೆ ತುರುಕಾಳಗದಲ್ಲಿ, ಪೆಣ್ಬುಯಲ್‌ನಲ್ಲಿ, ಸ್ವಾಮೀ ಕಾರ್ಯದಲ್ಲಿ, ನೆಂಟನಿಗೆ ತೊಂದರೆ ಬಂದಾಗ, ಊರು ನಾಶವಾಗುವಾಗ, ಯಾರು ಧೃಡ ನಿರ್ಧಾರ ಮಾಡಿ ತನ್ನ ಗಂಡುತನವನ್ನು ಮೆರೆಯುವು ದಿಲ್ಲವೋ ಅವನು ಗಂಡಸಲ್ಲ, ನಪುಂಸಕ ಎಂಬ ಭಾವನೆ ಅಂದಿನ ಕಾಲದ ಸಮಾಜದಲ್ಲಿತ್ತು. ತುರುಗಳು, ಸ್ತ್ರೀಯರು ಊರುಗಳನ್ನು ಶತ್ರುಗಳಿಂದ ರಕ್ಷಿಸುವುದು ಗಂಡಸರ ಪರಮ ಕರ್ತವ್ಯವಾಗಿತ್ತೆಂದು ಈ ಉಲ್ಲೇಖದಿಂದ ತಿಳಿದು ಬರುತ್ತದೆ.

ಈ ರೀತಿಯಲ್ಲಿನ ಅಂಶಗಳ ಗಮನದಲ್ಲಿಟ್ಟುಕೊಂಡು ಹಾಸನ ಜಿಲ್ಲೆಯ ದೊರೆಯುವ ಶಾಸನ ಉಲ್ಲೇಖಿತ ವೀರಗಲ್ಲುಗಳನ್ನು ಅಧ್ಯಯನ ಮಾಡಿದಾಗ ನಮಗೆ ಅಂದಿನ ರಾಜಕೀಯ ಇತಿಹಾಸ ಮತ್ತು ಕಾಲಾಮಾನ ವೀರಗಲ್ಲಿನ ವಿಧಗಳು, ಸಾಮಾಜಿಕ, ಆರ್ಥಿಕ ಅಂಶಗಳು ಬರೆದಂತಹ ಓಜ ಮತ್ತು ಶಾಸನ ವೀರಗಲ್ಲು ಹಾಕಿಸಿದವರು, ಆಡಳಿತಾಧಿಕಾರಿಗಳು, ಮಾಹಿತಿಗಳ ಜೊತೆಗೆ ಭಾಷೆ ಮತ್ತು ಲಿಪಿಯ ಆಗಿನ ಪ್ರೌಢತೆಯ ನಮಗೆ ತಿಳಿದು ಬರುತ್ತವೆ.

**ರಾಜಕೀಯ ಇತಿಹಾಸ:** ಶಾಸನ ಸ್ಮಾರಕ ಶಿಲ್ಪಗಳ ಮುಖಾಂತರ ಹಾಸನ ಜಿಲ್ಲೆಯ ರಾಜಕೀಯ ಅಂಶವನ್ನು ಗಮನಿಸಿದಾಗ ಗಂಗರ ಕಾಲದ ವೀರ ಶಾಸನಗಳು ಪ್ರಾಚೀನವಾದವಾಗಿವೆ. ಗಂಗರ ಕಾಲದಲ್ಲಿನ ಗಂಗವಾಡಿ ತೊಂಭತ್ತಾರು ಸಾವಿರ ಪ್ರಾಂತ್ಯದಲ್ಲಿ ಶ್ರವಣ ಬೆಳಗೊಳ, ಬೇಲೂರು ಹಾಗೂ ಹಾಸನದ ಇತರ ಭಾಗಗಳು ಪ್ರಮುಖ ಕೇಂದ್ರಗಳಾಗಿದ್ದವು. ಈ ರೀತಿಯಲ್ಲಿ ಕ್ರಿ.ಶ 907ರ ಗಂಗೂರು ವೀರಗಲ್ಲಿನ ಶಾಸನವು ಎರಡನೇ ರಾಚಮಲ್ಲ ಮತ್ತು ಎರೆಯಪ್ಪರಸ (ಎರೆಗಂಗನ) ಕಾಲದ್ದಾಗಿದೆ. ಎರಗಂಗನ ಸತ್ಯವಾಕ್ಯ ಪೆರ್ಮಾಡಿ ಎಂಬ ಬಿರುದು ಮತ್ತು ಆತನ 37 ನೇ ವರ್ಷದ ಆಳ್ವಕೆಯ ಕಾಲದಲ್ಲಿ ನೀಡಿದ ಧಾನದ ಬಗ್ಗೆ ನಮಗೆ ಈ ವೀರಗಲ್ಲು ಶಾಸನ ತಿಳಿಸುತ್ತದೆ. ಬಾಳ್ಲಾ ಗ್ರಾಮದ ವೀರಗಲ್ಲು ಶಾಸನವು ನೀತಿಮಾರ್ಗ ಮಹಾರಾಜ ಎಂದು ತಿಳಿಸಿದ್ದು ಇದು ಬೂತುಗನ ಮಗನಾದ ಎರಡನೆಯ ನೀತಿಮಾರ್ಗನಿರಬಹುದು. ಈತ ಸತ್ತ ವೀರನ ಹೆಂಡತಿಗೆ ಪೇರ್ಗಡೆಯ (ಹೆಗ್ಗಡೆ) ಸಾಕ್ಷಿಯಾಗಿ ಹಣವನ್ನು ಕೊಟ್ಟ ಬಗ್ಗೆ ತಿಳಿಸುತ್ತದೆ. ಕ್ರಿ ಶ 971–972ರ ನರ್ಲಿಗೆಯ ವೀರಗಲ್ಲು ಶಾಸನವು ಗಂಗರ ದೊರೆ ಮಾರಸಿಂಘದೇವನು (2ನೇಮಾರಸಿಂಹ) ನೊಳಂಬರನ್ನು ಸೋಲಿಸಿದ್ದು ಮತ್ತು ಅತನ ಕಡೆಯವನಾದ ಅನವಸಯ್ಯ ಎಂಬುವನು ಈ ಹೋರಾಟದಲ್ಲಿ ಮರಣಿಸಿದರ ಬಗ್ಗೆ, ಹಾಗೂ ಬೂತಗನು ದಾನ ನೀಡಿದ ಬಗ್ಗೆ ವಿವರಣೆಯಿದೆ. ಹಾಗೆಯೇ ಕ್ರಿ ಸ 971ರ ಕರಗಡದ ವೀರಗಲ್ಲು ಶಾಸನವು ಗಂಗರ ಎರಡನೇ ಮಾರಸಿಂಹನು (2ನೇ ಮಾರಸಿಂಹ) ನೊಳಂಬರನ್ನು ಸೋಲಿಸಿದ್ದು ಮತ್ತು ಅತನ ಕಡೆಯವರಾದ ಅನವಸಯ್ಯ ಎಂಬುವವನು ಈ ಹೋರಾಟದಲ್ಲಿ ಮರಣಿಸಿದರ ಬಗ್ಗೆ ಬೂತುಗನು ದಾನ ನೀಡಿದ ಬಗ್ಗೆ ವಿವರಣೆಯಿದೆ. ಹಾಗೇಯೇ ಕ್ರಿ. ಶ. 971ರ ಕರಗಡದ ಮತ್ತೊಂದು ವೀರಗಲ್ಲು ಶಾಸನವು ಗಂಗರ ಎರಡನೇ ಮಾರಸಿಂಹನ ಕಾಲದಲ್ಲಿ ಉಚ್ಚಂಗಿಯ ಕೋಟೆಯ ಮೇಲೆ ರಾಜಾದಿತ್ಯನ ದಾಳಿಯನ್ನು ತಿಳಿಸುತ್ತದೆ. ಕ್ರಿ.ಶ. 10ನೇ ಶತಮಾನದ ಮುತ್ತಿಗೆ ಗ್ರಾಮದ ವೀರಗಲ್ಲು ಶಾಸನವು ಗಂಗರಾಜ ನೀತಿಮಾರ್ಗ ರಾಚಮಲ್ಲ ಪೆರ್ಮನಾಡಿ ಎಂದು ಉಲ್ಲೇಖಿಸಿದ್ದು, ಬಹುಶಃ ಈತ 2ನೇ ರಾಚಮಲ್ಲ ಇರಬಹುದಾಗಿದ್ದು ಈತನೂ ಕೊಂಬಾಲೆ ಎಂಬ ಸ್ಥಳದಲ್ಲಿ ಮರಣಿಸಿದ ಬಗ್ಗೆ ಮಾಹಿತಿಯಿದೆ. ಈ ರೀತಿಯಲ್ಲಿ 9 ಮತ್ತು 10ನೇ ಶತಮಾನದಲ್ಲಿ ಗಂಗರ ಕಾಲದಲ್ಲಿನ ವೀರಗಲ್ಲು ಶಾಸನಗಳು ದೊರೆತ್ತಿದ್ದು ಪ್ರಮುಖವಾಗಿ ವೀರನೂ ಮರಣಿಸಿದಾಗ ಅತನ ಕುಟುಂಬದವರಿಗೆ ಭೂದಾನ ಮತ್ತು ಹಣದ ರೂಪದಲ್ಲಿ ಕೊಡುಗೆಯನ್ನು ನೀಡುತ್ತಿದ್ದ ಬಗ್ಗೆ ವೀರಗಲ್ಲು ಶಾಸನಗಳ ಮೂಲಕ ತಿಳಿಯಬಹುದಾಗಿದೆ. ನಂತರ ಕಾಲದಲ್ಲಿ ಹೊಯ್ಸಳರ ಕಾಲದ ವೀರಗಲ್ಲುಗಳು ಯಥೇಚ್ಚವಾಗಿ ದೊರೆಯುತ್ತವೆ. ಕ್ರಿ.ಶ. 1022ರ ರಾಜೇಂದ್ರಪುರದ ವೀರಗಲ್ಲು ಶಾಸನವು ರಾಜೇಂದ್ರ ಪೃಥ್ವಿರಾಜ ಮತ್ತು ಹೊಯ್ಸಳ ನೃಪಕಾಮನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1138ರ ದಬ್ಬೆ ಅಗ್ರಹಾರದ ವೀರಗಲ್ಲು ಶಾಸನವು ವಿಷ್ಣುವರ್ಧನನ ಹಾನಗಲ್ ಕೋಟೆ ಮುತ್ತಿಗೆ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಕ್ರಿ.ಶ. 11ನೇ ಶತಮಾನದ ಹನುಮಾನಹಳ್ಳಿ ವೀರಗಲ್ಲು ಶಾಸನವು ವಿಷ್ಣುವರ್ಧನನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ. ತದನಂತರ ಕ್ರಿ.ಶ. 1206ರ ಕೂಸಾವರ ವೀರಗಲ್ಲು ಶಾಸನವು ಎರಡನೇ ವೀರಬಲ್ಲಾಳನ ತಗರೆ ನಾಡಿನ ಆಳ್ವಿಕೆಯ ಬಗ್ಗೆ ಮತ್ತು ಕ್ರಿ. ಶ. 1211 ರ ಮಡಬಲು ಗ್ರಾಮದ ವೀರಗಲ್ಲು ಶಾಸನ 2ನೇ ಬಲ್ಲಾಳನ ಕಾಲದಲ್ಲಿ ಮಾತೆಯ ನಾಯಕ ಎಂಬಾತ ಕೆರೆಯನ್ನು ನಿರ್ಮಿಸಿದ ಬಗ್ಗೆ ತಿಳಿಸುತ್ತವೆ. ಕ್ರಿ. ಶ. 1194 ಅಗ್ಗಡಲು ವೀರಗಲ್ಲು ಶಾಸನವು 2ನೇ ವೀರಬಲ್ಲಾಳನ ಕರಿಗೋಡು ಕೋಟೆಯ ದಾಳಿಯ ಬಗ್ಗೆ ಉಲ್ಲೇಖಿಸಿದೆ. ಅಲ್ಲದೇ ನಂತರ ಕಾಲದ ಸೋಮೇಶ್ವರ ಕಾಲಕ್ಕೆ ಸಂಬಂಧಿಸಿದಂತೆ ಕ್ರಿ.ಶ. 1236 ಗೋಣಿ ಸೋಮನಹಳ್ಳಿ ವೀರಗಲ್ಲು

ಶಾಸನ ಮತ್ತು ಕ್ರಿ ಶ. 1244ರ ಚಿಕ್ಕೊಲೆ ಗ್ರಾಮದ ಹಾಗೂ ಕ್ರಿ ಶ 1245ರ ಚೆನ್ನನಹಳ್ಳಿ ವೀರಗಲ್ಲು ಶಾಸನಗಳು ವೀರ ಸೋಮೇಶ್ವರ ಆಡಳಿತದ ಬಗ್ಗೆ ಬೆಳಕು ಚೆಲ್ಲುತ್ತವೆ. ನಂತರ ಕಾಲದಲ್ಲಿ ಸೋಮೇಶ್ವರನು ತನ್ನ ಮಕ್ಕಳಾದ ರಾಮನಾಥ ಮತ್ತು 3ನೇ ನರಸಿಂಹನಿಗೂ ರಾಜ್ಯವನ್ನು ಹಂಚಿಕೊಟ್ಟನು. ರಾಮನಾಥ ತಮಿಳುನಾಡಿನ ಕಣ್ಣಾನೂರಿಲ್ಲು ಮತ್ತು 3ನೇ ನರಸಿಂಹ ದ್ವಾರಸಮುದ್ರದಲ್ಲಿ ಆಳ್ವಿಕೆ ನಡೆಸುತ್ತಿದ್ದು ಈತನ ಬಗ್ಗೆ ಕ್ರಿ ಶ. 1277ರ ಮರಸುಗ್ರಾಮದ ಮತ್ತು ಕ್ರಿ ಶ 1282ರ ಅದೇ ಗ್ರಾಮದ ವೀರಗಲ್ಲು ಶಾಸನಗಳು ಬೆಳಕು ಚೆಲ್ಲುತ್ತವೆ. ಈತನ ನಂತರ 3ನೇ ಬಲ್ಲಾಳನು ಕ್ರಿ.ಶ. 1291ರಲ್ಲಿ ಅಧಿಕಾರಕ್ಕೆ ಬಂದನು. ಈತನ ಕಾಲಕ್ಕೆ ಸಂಬಂಧಿಸಿದಂತೆ ಕ್ರಿ.ಶ. 1301 ರ ತಗರೆ ಗ್ರಾಮದ ವೀರಗಲ್ಲು ಶಾಸನ ಮಾಹಿತಿ ಮತ್ತು 1031ರ ಕಲ್ಲುಂಡಿಯ ಗ್ರಾಮದ ವೀರಗಲ್ಲು ಶಾಸನವು ಈತನ ಕಾಲದಲ್ಲಿ ತುರುಕುರ (ಮುಸ್ಲಿಂ) ದಾಳಿಯ ಬಗ್ಗೆ ಬರೆದಿದೆ. ಹೊಯ್ಸಳರ ನಂತರ ವಿಜಯನಗರ ಕಾಲದ ವೀರಗಲ್ಲು, ಶಾಸನಗಳು ದೊರೆತಿದ್ದರು, ಅದರೆ ವಿಶೇಷವಾಗಿ ವೀರಗಲ್ಲು ಶಾಸನಗಳು ದೊರಕಿರುವುದು ಕಂಡುಬರುವುದಿಲ್ಲಾ. ಆದ್ದರಿಂದ ವೀರಗಲ್ಲು ಶಾಸನಗಳು ರಾಜಕೀಯ ಇತಿಹಾಸವನ್ನು ಶೋಧಿಸುವಾಗ ನಮಗೆ ತಳಭಾಗದ ಗ್ರಾಮದ ಜನರು ಸಹ ಯುದ್ಧದಲ್ಲಿ ಭಾಗವಹಿಸುವಿಕೆ ಜೊತೆಗೆ ಅಧಿಕಾರವರ್ಗದ ಸಾಮಾಜಿಕ ಮತ್ತು ಆರ್ಥಿಕತೆಯಲ್ಲಿನ ಪಾತ್ರದಲ್ಲಿ ರಾಜಕೀಯ ಮಹತ್ವ ಅಂಶಗಳ ಉಲ್ಲೇಖಿಸಿದ್ದಾರೆ. ಅಲ್ಲದೇ ಪ್ರಮುಖವಾಗಿ ಇವರೆಲ್ಲರೊಂದಿಗೆ ಗಂಗರು, ನೊಳಂಬರು, ಚೋಳರ, ಪಾಂಡ್ಯರು, ಇತರ ಸಣ್ಣಪುಟ್ಟ ರಾಜ್ಯಗಳ ಉಲ್ಲೇಖವು ಸಹ ಈ ವೀರಗಲ್ಲು ಶಾಸನಗಳಲ್ಲಿ ಬೆಳಕು ಚೆಲ್ಲಿರುವುದನ್ನು ಕಾಣಬಹುದು.

**ಸ್ಮಾರಕ ಶಿಲ್ಪಗಳ ವಿಧಗಳು:** ವೀರಗಲ್ಲು ಶಾಸನಗಳಲ್ಲಿ ರಾಜಕೀಯ ಅಂಶಗಳ ನಂತರ ಪ್ರಮುಖವಾಗಿ ಗೋಚರಿಸುವುದು ವೀರ. ವೀರರ ಸಾವಿಗೆ ಒಂದು ಕಾರಣವಿದ್ದು ಆ ರೀತಿಯ ವೀರ ಮರಣಗಳನ್ನೂ ಅದೂ ಅನೇಕ ವಿಧಗಳಿಂದ ಕೂಡಿರುವುದನ್ನು ಈ ಕೆಳಗಿನ ಅಂಶಗಳಿಂದ ತಿಳಿಯಬಹುದಾಗಿದೆ ಅವುಗಳೆಂದರೇ,

**1. ತುರುಗೊಳ್ / ಗೋಗ್ರಹಣದ ಶಾಸನೋಕ್ತ ವೀರಗಲ್ಲುಗಳು:** ವೀರರ ಮರಣದ ಕೃತ್ಯಗಳಲ್ಲಿ ಈ ಪ್ರಭೇಧ ಅತಿ ಪ್ರಮುಖವಾಗಿದೆ. ಪ್ರಾಚೀನ ಕಾಲದಿಂದಲೂ ಧನಕರುಗಳು ಮಾನವನಿಗೆ ಸಹಾಯಕ ಮತ್ತು ಅತ್ಯಾವಶ್ಯಕವಾದ ಸಂಪನ್ಮೂಲ ಜೀವಿಗಳು. ಇವು ಮಾನವನ ಕೃಷಿ, ಸಾಗಾಣಿಕೆ ಮತ್ತು ಮುಖ್ಯ ಆಹಾರಗಳಲ್ಲಿ ಒಂದಾದ ಹಾಲಿಗೆ ಮುಖ್ಯವಾಗಿದ್ದವು. ಇವುಗಳನ್ನು ಕದಿಯುವ ಅಪಹರಿಸುವ ಪ್ರವೃತ್ತಿವುಳ್ಳ ಕಳ್ಳರು ಬಂದಾಗ ಆ ಸಮಯದಲ್ಲಿ ಗೋವುಗಳನ್ನು ಕಾಯುತ್ತಿದ್ದ ಗೋವಳರು ಅಥವಾ ಊರಿನ ಜನರು ಗೋವುಗಳನ್ನು ರಕ್ಷಿಸಲು ಮುಂದಾಗುತ್ತಿದ್ದರು. ಈ ಸತ್ತವರ ನೆನಪಿಗೆ ಶಿಲಾಸ್ಮಾರಕಗಳ ಹಾಕಿಸುತಿದ್ದು ಈ ರೀತಿಯ ಸ್ಮಾರಕಗಳು ಇಂದಿಗೂ ನಮಗೆ ದೊರಕಿಬಂದಿವೆ. ಹಾಗೆಯೇ ತುರುಗೋಳ್ ಕದನದಲ್ಲಿ ಶೌರ್ಯವನ್ನು ಮರೆಯದವನನ್ನು ಹೇಡಿಯೆಂದು ಜನರು ಬಾವಿಸುತ್ತಿದ್ದರು. ಅಲ್ಲದೆ ಗೋವು ಪೂಜನೀಯವಾದದ್ದು ಮತ್ತು ಅದನ್ನು ಕಳೆದುಕೊಳ್ಳಲಾಗದ ಆಸ್ತಿಯಾಗಿದ್ದು, ಅದನ್ನು ಕಳೆದುಕೊಳ್ಳುವುದು ಊರಿನ ವ್ಯಕ್ತಿಯ ಮಾನ ಮತ್ತು ಅವಮಾನದ ಪ್ರಶ್ನೆಯೂ ಸಹ ಆಗಿತ್ತು. ಹಾಸನ ಜಿಲ್ಲೆಯ ಪ್ರಾಚೀನ ಕಾಲದಲ್ಲಿನ ತುರುಕಾಳಗದ ವೀರಗಲ್ಲು ಶಾಸನವನ್ನು ಗಮನಿಸಿದಾಗ ಕ್ರಿ.ಶ. 985ರ ನಲ್ಲೂರು ಗ್ರಾಮದ ಶಾಸನ ವೀರಗಲ್ಲಿನಲ್ಲಿ ಬೇಡರ ಬೀರಮ್ಮ ಎಂಬಾತ ಹಸುಗಳನ್ನು ಕದಿಯಲು ದಾಳಿಯಿಟ್ಟಾಗ ದುರ್‌ಗುಂಡಯ್ಯನು ಹೋರಾಡಿ ತನ್ನ ಕುದುರೆಯೊಂದಿಗೆ ಮರಣಿಸಿದನು. ಆಗ ಆತನ ಮಗ ಎರೆಯಂಗನು ತಂದೆಯ ನೆನಪಿಗೆ ಪರೋಕ್ಷ ವಿನಯಂ ಮಾಡಿಸಿ (ಅಂದರೆ ಸತ್ತನಂತರ ನಡೆಸುವ ಕರ್ಮಕ್ರಿಯೆಗಳು,) ವೀರಗಲ್ಲು ಹಾಕಿಸಿದ ಎಂದಿದೆ. ಮರೆವೆ ಗ್ರಾಮದ ಸವಣಿಲವ ಕುಸ್ಬುಗನೆಲ್ಲೈನ್ ಮಗ ದುಟ್ಟಲಯ್ಯನು ತುರು ಕಾಳಗದಲ್ಲಿ ಮರಣಿಸಿದ ಬಗ್ಗೆ ಉಲ್ಲೇಖಿಸಿದೆ. ಕ್ರಿ.ಶ. 879ರ ಬಸವಾಪಟ್ಟಣದ ವೀರಗಲ್ಲಿನಲ್ಲಿ ಮಾಚಿ ದೇವಮ್ಮಯ್ಯನು ತುರು ಕಾಳಗದಲ್ಲಿ ವೀರ ಸ್ವರ್ಗವನ್ನು ಸೇರಿದುದರ ಬಗ್ಗೆ ತಿಳಿಸುತ್ತದೆ. ಅಲ್ಲದೇ ತಾವರೆಕೆರೆಯ 13ನೇ ಶತಮಾನದ ಮೂರನೇ ನರಸಿಂಹನ ಕಾಲದಲ್ಲಿನ ತುರುಕಳ್ಳರೊಂದಿಗೆ ಚಾಕಗಾವುಂಡನು ಹೋರಾಡಿ ಮರಣಿಸಿದರ ಬಗ್ಗೆ ಉಲ್ಲೇಖಿಸಿದೆ. ಅರಸೀಕೆರೆಯ 14ನೇ ಶತಮಾನದ ವೀರಗಲ್ಲಿನಲ್ಲಿ ಮನೆ ಕೆಲಸದವನಾದ ಮತ್ತಿ ಬೋವನ ಮಗ ಬಮ್ಮನು ಗಾಡಿ ಎಳೆಯುವ ಎತ್ತುಗಳನ್ನು ಕದಿಯಲು ಬಂದಂತಹ ಕಳ್ಳರನ್ನು ತಡೆದು, ಹೋರಾಡಿ ಮರಣಿಸಿದನು. ಈತನು ಮಹಾಪ್ರಧಾನ ಹೆಗ್ಗಡೆಯ ಸೇವಕನಾಗಿದ್ದ ಬಗ್ಗೆ ಈ ಶಾಸನವು ಉಲ್ಲೇಖಿಸಿದೆ. ಈ ರೀತಿಯಲ್ಲಿ ತುರುಕಾಳಗದಲ್ಲಿನ ವೀರಗಲ್ಲು ಶಾಸನದಲ್ಲಿ ವೀರರ ತಂದೆ, ಸಹೋದರ, ಸೇವಕರ ಬಗ್ಗೆ ಅವರ ವೃತ್ತಿ, ಆ ಸಂದರ್ಭದಲ್ಲಿ ಕಂಡುಬರುವ ಮುಖ್ಯ ವ್ಯಕ್ತಿಗಳ ಬಗ್ಗೆಯೂ ಸಹ ಮಾಹಿತಿ ನೀಡಿರುವುದನ್ನು ಕಾಣಬಹುದಾಗಿದೆ.

**2. ಪೆಣ್ಬುಯಲ್ ಹೋರಾಟದ ವೀರಗಲ್ಲು:** ಪೆಣ್ಬುಯಲ್ ಎಂದರೆ ಹೆಣ್ಣಿನ ಅಸಹಾಯಕ ಆರ್ತ ಧ್ವನಿ ಅಥವಾ ಕೂಗು ಎಂಬರ್ಥವಿದೆ. ಕಳ್ಳರು ತುರುಗಳನ್ನು ಕದಿಯಲು ಬಂದಾಗ ಸ್ತ್ರೀಯರನ್ನು ಅಪಹರಿಸುವುದು ಮತ್ತು ಮಾನಭಂಗಕ್ಕೆ ಯತ್ನಿಸುತ್ತಿದ್ದರು. ಇಂತಹ ಸಮಯದಲ್ಲಿ ಹೆಣ್ಣಿನ ಹುಯ್ಯಲನ್ನು (ಕೂಗು) ಕೇಳಿ ಗ್ರಾಮದ ಯುವಕರು ಅಥವಾ ಜನರು ರಕ್ಷಿಸಲು ಹೋಗಿ ಹೋರಾಡಿ ಮಡಿಯುತ್ತಿದ್ದರು. ಇವರ ಸ್ಮರಣಾರ್ಥವಾಗಿ ಹಾಕಿಸಿರುವ ಸ್ಮಾರಕಗಳೇ ಪೆಣ್ಬುಯಲ್ ವೀರಗಲ್ಲುಗಳು. ಹಾಸನ ಜಿಲ್ಲೆಯಲ್ಲಿ ಶಾಸನ ಉಲ್ಲೇಖವಿಲ್ಲದ ಪೆಣ್ಬುಯಲ್ ವೀರಗಲ್ಲುಗಳು ಸಾಕಷ್ಟಿವೆ. ಅದರಲ್ಲಿ ಶಾಸನ ಉಲ್ಲೇಖಿತವಾಗಿರುವುದನ್ನು ಗಮನಿಸಿದಾಗ ನಮಗೆ ಕ್ರಿ.ಶ. 1117ರ ಎರಡನೇ ವೀರಬಲ್ಲಾಳನ ಕಾಲದ ಕಿತ್ತನಕೆರೆ ವೀರಗಲ್ಲು ಶಾಸನದಲ್ಲಿ ತಿಳಿಸುವಂತೆ ಹಾರುವನಹಳ್ಳಿಯ ದಾರಿಯಲ್ಲಿ ಹೆಣ್ಣುಮಕ್ಕಳನ್ನು ದರೋಡೆಕೋರರು ಮುತ್ತಿದಾಗ ಚೆಟ್ಟಿಗೌಡರ ಮುಳ್ಳಯ್ಯನ ಮಗ ಸೋಮಯ್ಯ ಮತ್ತು ಆತನ ಮಾವ ಬೆಚ್ಚಯ್ಯನು ಸೇರಿ ವೀರಾವೇಶದಿಂದ ಹೋರಾಡಿ ಹೆಣ್ಣುಮಕ್ಕಳ ರಕ್ಷಿಸಿ ಕಳುಹಿಸಿ ಕಳ್ಳರನ್ನು ಕೊಂದು ತಾವು ಕೂಡ ಸುರಲೋಕ ಪ್ರಾಪ್ತರಾದರೆಂದು ಉಲ್ಲೇಖಿಸಿದೆ. ಈ ರೀತಿಯಲ್ಲಿ ಪ್ರಾಚೀನ ಕಾಲದ ಸ್ತ್ರೀ ರಕ್ಷಣೆ ಹೋರಾಟದ ಬಗೆಗಿನ ಪೆಣ್ಬುಯಲ್ ವೀರಗಲ್ಲುಗಳನ್ನು ಈ ಜಿಲ್ಲೆಯಲ್ಲಿ ಸಹ ಕಾಣಬಹುದಾಗಿದೆ.

**3. ಕಳ್ಳರೊಂದಿಗಿನ ಹೋರಾಟದ ವೀರಗಲ್ಲುಗಳು:** ಕಳ್ಳರೊಡನೆ ಹೋರಾಡಿ ಮಡಿದವರ ವೀರಗಲ್ಲುಗಳನ್ನು ಗುರುತಿಸಲು ಬಹಳ ಕಷ್ಟವಾಗುತ್ತದೆ. ಇದನ್ನು ಗುರುತಿಸಲು ಶಾಸನದ ಪಾಠದ ಸಹಾಯ ಅವಶ್ಯಕ. ಈ ಬಗೆಯ ಶಿಲ್ಪಗಳು ಸಾಮಾನ್ಯವಾಗಿ ವೀರಗಲ್ಲು ಶಿಲ್ಪದಂತೆಯೇ ಇರುತ್ತದೆ. ಶಾಸನದ ಪಾಠವನ್ನು ಓದಿ ಕಳ್ಳರೊಡಗಿನ ಹೋರಾಟದಲ್ಲಿ ಮರಣಿಸಿದರ ಬಗ್ಗೆ ನಿರ್ಧರಿಸಬಹುದು. ದಾರಿಗಳ್ಳರೊಡನೆ ಅಲ್ಲವೇ ಊರಿಗೆ ಬಂದಂತಹ ದರೋಡೆಕೋರರ ವಿರುದ್ಧ ಹೋರಾಡಿ ಮಡಿದ ವೀರರ ವೀರಗಲ್ಲುಗಳನ್ನು ಕಂಡು ಬಂದು ಆದರಲ್ಲಿ ಶಾಸನೋಕ್ತ ವೀರಗಲ್ಲಿಗೆ ಸಂಬಂಧಿಸಿದಂತೆ ಅರಸೀಕೆರೆಯ ಶಾಸನ ಸಂಖ್ಯೆ 11ರಲ್ಲಿ ಮಲ್ಲಶೆಟ್ಟಿಯ ತಮ್ಮ ವೀರಶೆಟ್ಟಿಯು ಕಳ್ಳರೊಂದಿಗೆ ಹೋರಾಡಿ ಅವರನ್ನು ಕೊಂದು ತಾನೂ ಸಹ ಮರಣಿಸಿದರ ಬಗ್ಗೆ ವಿವರಣೆ ಇದೆ. ಹಾಗೆಯೇ

ಹನುಮನಹಳ್ಳಿಯ ವೀರ ಶಾಸನ ಸಂಖ್ಯೆ 78ರಲ್ಲಿನ ಶಾಸನವು ಮೈದುವೆಗ್ಗಡೆಯು ದಾರಿಯ ಚಕಮಕಿ (ಗಲಾಟೆ)ಯಲ್ಲಿ ಮರಣಿಸಿದರ ಬಗ್ಗೆ ವಿವರಣೆ ನೀಡುತ್ತದೆ. ಅಲ್ಲದೇ ಕಿತ್ತನಕೆರೆಯ ವೀರಗಲ್ಲು ಶಾಸನದಲ್ಲಿ ಹಾರುವನಹಳ್ಳಿಯ ದಾರಿಯಲ್ಲಿ ಹೆಣ್ಣುಮಕ್ಕಳನ್ನು ದರೋಡೆಕೋರರು ಮುತ್ತಿದಾಗ ಸೋಮಯ್ಯ ಮತ್ತು ಆತನ ಮಾವ ಚೆಟ್ಟಯ್ಯನು ವೀರಾವೇಶದಿಂದ ಹೋರಾಡಿ ರಕ್ಷಿಸಿದ ಬಗ್ಗೆ ಉಲ್ಲೇಖವಿದೆ. ಈ ರೀತಿಯಲ್ಲಿ ಈ ದಾರಿಗಳ್ಳರ ಹಾವಳಿಯು ಪ್ರಾಚೀನ ಕಾಲದಿಂದಲೂ ಇದ್ದು, ಹಿಂದಿನ ಕಾಲದಲ್ಲಿ ವ್ಯಾಪಾರ, ವ್ಯವಹಾರಗಳಿಗಾಗಿ ಜನಸಮಾನ್ಯರು ಮತ್ತು ವ್ಯಾಪಾರಿಗಳು ಎತ್ತಿನ ಗಾಡಿಗಳ ಮೇಲೆ, ಪ್ರಾಣಿಗಳು ಮತ್ತು ಕಾಲ್ನಡಿಗೆಯ ಮೂಲಕ ಪ್ರಯೋಗಿಸುತ್ತಿದದ್ದರು ಇಂತಹ ಸಂದರ್ಭದಲ್ಲಿ ಕಳ್ಳರು ಕಳ್ಳತನ ಉದ್ದೇಶದಿಂದಲೇ ದಾಳಿ ಮಾಡುತ್ತಿದ್ದುದರ ಬಗ್ಗೆ ಈ ವೀರಗಲ್ಲು ಶಾಸನಗಳು ಸಾಕ್ಷಿಯಾಗಿವೆ.

**4. ಗಡಿ ಕಾಳಗದ ಶಾಸನ ವೀರಗಲ್ಲುಗಳು:** ಹಳ್ಳಿ ಹಳ್ಳಿಗಳ ಗಡಿಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿ ಅ ವಿವಾದವು ಗಡಿ ಕಾಳಗದ ಮೂಲಕ ಮುಕ್ತಾಯವಾಗುತ್ತಿದ್ದ ನಿದರ್ಶನಗಳು ನಮಗೆ ದೊರಕುತ್ತವೆ. ಒಂದೊಂದು ಹಳ್ಳಿಗೂ ಗಡಿಗಳನ್ನು ರಾಜ್ಯದ ಅಧಿಕಾರಿಗಳು ನಿರ್ಧರಿಸುತ್ತಿದ್ದರು. ಆ ಕಾಲದಲ್ಲಿ ಒಂದೊಂದು ಗ್ರಾಮವು ಆಡಳಿತ ದೃಷ್ಟಿಯಿಂದ ಸ್ವತಂತ್ರ ಘಟಕವಾಗಿದ್ದುದರಿಂದ ಆಯಾ ಊರಿನ ಗಡಿಗಳಿಗೆ ಸ್ವಲ್ಪ ಮಟ್ಟಿಗೆ ಆಯಾ ಊರಿನ ಜನರೇ ಹೊಣೆಗಾರರಾಗುತ್ತಿದ್ದರು. ಹಾಗೆಯೇ ಗ್ರಾಮಗಳ ಶಾಂತಿಯುತ ಒಪ್ಪಂದ ವಿಫಲವಾದಾಗ ಹಳ್ಳಿ ಹಳ್ಳಿಗಳಿಗೆ ಹೋರಾಟ ನಡೆದು ಅನೇಕರು ಮಡಿಯುತ್ತಿದ್ದರು. ಈ ರೀತಿಯ ನಿದರ್ಶನಗಳಿಗೆ ಹಾಸನ ಜಿಲ್ಲೆಯ ವೀರಗಲ್ಲು ಶಾಸನಗಳು ಸಹ ಸಾಕ್ಷಿಯಾಗಿವೆ. ಕ್ರಿ.ಶ. 1174ರ ಹೊನ್ನಾವರ ಗ್ರಾಮದ ವೀರಗಲ್ಲು ಶಾಸನವು ಹೊನ್ನಾವರ ಮತ್ತು ನಿರ್ಗುಂದದ ಗಡಿ ಕಾಳಗದಲ್ಲಿ ಹೊನ್ನಾವರ ಭೀಮನ ಮಗ ಹೊನ್ನಗಾವುಂಡನು ಮರಣಿಸಿದರ ಬಗ್ಗೆ ತಿಳಿಸುತ್ತದೆ. ಐರವಳ್ಳಿಯ ಕ್ರಿ. ಶ. 1188ರ ಕಾಲದ ಶಾಸನವು ಅಗ್ಗಡಲು ಮತ್ತು ಐರವಳ್ಳಿಯ ಗಡಿಯ ಕಾಳಗದಲ್ಲಿ ಕಾಳಯ ಗಾವುಂಡನ ಮರಣಿಸಿದುದರ ಉಲ್ಲೇಖವಿದೆ. ಹಾಗೆಯೇ ಅಗ್ಗಡಲು ಕ್ರಿ ಶ. 1195ರ ಕಾಲದ ವೀರಗಲ್ಲು ಶಾಸನ ಐರವಳ್ಳಿ ಮತ್ತು ಅಗ್ಗಡಾಲಿನ ನಡುವಿನ ಮತ್ತೊಂದು ಕಾಳಗದ ಬಗ್ಗೆ ಉಲ್ಲೇಖಿಸಿ ಈ ಗಡಿ ಕಾಳಗದಲ್ಲಿ ಬಳ್ಳುಗುಪ್ಪೆಯ ವಾಳಿಗಾವುಡನು ಮಡಿದುದರ ಬಗ್ಗೆ ತಿಳಿಸುತ್ತದೆ. ಮತ್ತು ಕ್ರಿ.ಶ. 1206ರ ಕೂಸಾವರ ವೀರಗಲ್ಲಿ ಶಾಸನವು ಕೂಸುವರದ ಅಸಿಯಮಾದಿಯ ವ್ಯಾಜ್ಯವು ಗಡಿಕಾಳಗದಲ್ಲಿ ಹೊನ್ನ ಗಾವುಂಡನ ಮಗ ಕವುರಣ ಮತ್ತು ಹಲವರು ಮರಣಿಸಿದ ಬಗ್ಗೆ ಉಲ್ಲೇಖವಿದೆ. ಭಾಗಡೆಯ ಕ್ರಿ.ಶ. 1239ರ ಶಾಸನದಲ್ಲಿ ಭಾಗಡೆ ಮತ್ತು ಕಿತ್ತನಕೆರೆಯ ಗಡಿ ಕಾಳಗದಲ್ಲಿ ಜಕ್ಕಯ್ಯನು ಮರಣಿಸಿದುದರ ಬಗ್ಗೆ ತಿಳಿಸುತ್ತದೆ. ಈ ರೀತಿಯಲ್ಲಿ ಗಡಿ ಕಾಳಗಗಳು ಹಳ್ಳಿ ಹಳ್ಳಿಗಳ ನಡುವೆ ಅನೇಕ ಕಾರಣಗಳಿಗೆ ನಡೆಯುತ್ತಿದ್ದು ಮತ್ತು ಅದು ಪದೇ ಪದೇ ಸಂಭವಿಸುತ್ತಿದ್ದನ್ನು ಈ ಶಾಸನ ವೀರಗಲ್ಲುಗಳಲ್ಲಿ ಕಾಣಬಹುದಾಗಿದೆ.

**5. ಕೋಟೆ ಕಾಳಗ ಶಾಸನ ವೀರಗಲ್ಲು:** ಕೋಟೆ ಎಂಬುದು ಪ್ರಾಚೀನ ಕಾಲದಲ್ಲಿ ರಾಜಕೀಯ ವ್ಯವಸ್ಥೆಯ ಮತ್ತು ಜನರ ರಕ್ಷಣೆಯ ಭಾರವನ್ನು ಹೊತ್ತಿತ್ತು. ಕೊಟೆಯ ಸಾಮರ್ಥ್ಯದ ಮೇಲೆ ಆಡಳಿತ ವ್ಯವಸ್ಥೆಯ ಉಳಿವು ಅಳಿವು ಕೆಲವೊಮ್ಮೆ ಅವಲಂಬಿಸುತ್ತಿತ್ತು. ಪ್ರಾಚೀನ ರಾಜರು ಅನೇಕ ರಾಜ್ಯಗಳ ಮೇಲೆ ದಂಡೆತ್ತಿ ಹೋಗಿ ಕೋಟೆಗಳ ಮೇಲೆ ಆಕ್ರಮಣ ಮತ್ತು ತಮ್ಮ ಕೋಟೆಯನ್ನು ಉಳಿಸಿಕೊಳ್ಳುವಲ್ಲಿ ಹೋರಾಡಿದಂತಹ ಸಮಯದಲ್ಲಿ ಮರಣಿಸಿದ ವೀರರ ವೀರಗಲ್ಲುಗಳು ಹಾಕಿಸಿರುವುದು ಸಾಮಾನ್ಯವಾಗಿದ್ದು. ಅವು ಈ ರೀತಿಯಲ್ಲಿ ಶಾಸನ ಉಲ್ಲೇಖಿತ ಈ ವೀರಗಲ್ಲುಗಳು ಅಂದಿನ ಯುದ್ಧಗಳ ಬಗ್ಗೆ ಒಂದು ಸಂಪೂರ್ಣ ಮಾಹಿತಿಯನ್ನು ನೀಡುತ್ತವೆ. ಆ ರೀತಿಯಲ್ಲಿ ಕ್ರಿ. ಶ. 971 ರ ಕರಗಡ ಗ್ರಾಮದ ಗಂಗರ 2ನೇ ಮಾರಸಿಂಹನ ಕಾಲದಲ್ಲಿ ಉಚ್ಚಂಗಿಯ ಕೋಟೆಯ ರಾಜಾದಿತ್ಯನ ಮೇಲಿನ ಕಾಳಗದಲ್ಲಿನ ಭಾಸ ಗಾವುಂಡನು ಮಡಿದುದರ ಬಗ್ಗೆ ತಿಳಿಸುತ್ತದೆ. ಹೆಣ್ಣೂರಿನ ಕ್ರಿ.ಶ. 1026 ರ ವೀರಗಲ್ಲು ಶಾಸನವು ರಾಜೇಂದ್ರ ಚೋಳ ಕೊಂಗಾಳ್ವನು ಮುಂಡ ಹೊಯ್ಸಳರ ಮೇಲೆ ನಡೆದಂತಹ ಮಗ್ಗಿ ಕಾಳಗದಲ್ಲಿನ ಇರ್ಗಡಲಿನ ಕೋಟೆಯನ್ನು ವಶಪಡಿಸಿಕೊಳ್ಳುವ ಬಗ್ಗೆ ಉಲ್ಲೇಖಿಸಿದೆ. ಹಾಗೆಯೇ ಹೆಂಚೂರಿನ ಕ್ರಿ.ಶ. 1174ರ ವೀರ ಬಲ್ಲಾಳನ ಕಾಲದ ಶಾಸನವು ಹೆಲವಾಗಿಲ ಕದನದ ಕಾಳಗದ ಬಗ್ಗೆ ತಿಳಿಸುತ್ತದೆ. ಅಗ್ಗಡಲಿನ ಕ್ರಿ ಶ, 1194ರ 2ನೇ ವೀರ ಬಲ್ಲಾಳನ ಕಾಲದ ವೀರಗಲ್ಲು ಶಾಸನವು ಕೂಗೂಡು ಕೋಟೆಯ ಮುತ್ತಿಗೆ ಹಾಕಿದುದರ ಬಗ್ಗೆ ಉಲ್ಲೇಖಿಸಿದೆ. ಚೆನ್ನನಹಳ್ಳಿಯ ವೀರ ಸೋಮೇಶ್ವರ ಕಾಲದ ಎರಡು ವೀರಗಲ್ಲು ಶಾಸನಗಳಲ್ಲಿನ ಕ್ರಿ .ಶ 1245ರ ಶಾಸನವೊಂದು ವೀರ ಸೋಮೇಶ್ವರ ಕಾಲದ ಕಣ್ಣಂದೂರು ಪಟ್ಟಣ (ತಮಿಳುನಾಡು, ಕಣ್ಣೂರು) ಆಳುತ್ತಿದ್ದ ಬಗ್ಗೆಯೂ ಹಾಗೆಯೇ ಮತ್ತೊಂದು ವೀರಗಲ್ಲು ಶಾಸನವು ಗೊರವೂರು ಕದನದ ಬಗ್ಗೆ ತಿಳಿಸುತ್ತದೆ. ಅಗ್ಗಡಲಿನ 12ನೇ ಶತಮಾನದ ಇನ್ನೊಂದು ಶಾಸನ ವೀರಗಲ್ಲಿನಲ್ಲಿ ದ್ವಾರಸಮುದ್ರದ ಮೇಲೆ 12 ಸಾಮಂತರು ದಾಳಿ ಮಾಡಿದಂತಹ ಕಾಳಗದ ಬಗ್ಗೆ ತಿಳಿಸುತ್ತದೆ. ಈ ರೀತಿಯಲ್ಲಿ ಕೋಟೆಗಳ ಮೇಲೆ ನಿರ್ದಿಷ್ಟ ದಾಳಿ ನಡೆದು ಇದರಲ್ಲಿ ಮಡಿದಂತಹ ವೀರರ ನೆನಪಿನಲ್ಲಿ ವೀರಗಲ್ಲುಗಳನ್ನು ನೆಡುವ ಪ್ರಸಂಗವಿದ್ದು ಅವುಗಳಲ್ಲಿ ಶಾಸನ ಉಲ್ಲೇಖಿತವಾಗಿರುವುದರಿಂದ ಹಿಂದೆ ನಡೆದಂತಹ ಮಹತ್ತರ ದಾಳಿಗಳ ಬಗ್ಗೆ ಪ್ರಮುಖವಾದ ಮಾಹಿತಿಗಳು ದೊರೆಯುತ್ತವೆ.

**6. ಯುದ್ಧದ ಶಾಸನ ವೀರಗಲ್ಲುಗಳು:** ಯುದ್ದ ಎಂಬುದು ಪ್ರಾಚೀನ ಕಾಲದಲ್ಲಿ ಅರಸರ ವೈಯಕ್ತಿಕ ಪ್ರತಿಷ್ಠೆ ಮತ್ತು ಅನುಕೂಲತೆಗಾಗಿ ನಡೆಯುತ್ತಿತ್ತು, ಅಂದರೆ ಅರಸರು ಯುದ್ದ ಮತ್ತು ಹೋರಾಟದ ಮೂಲಕ ಭೂಮಿ ಮತ್ತು ಸಂಪತ್ತು ವಶಪಡಿಸಿಕೊಳ್ಳಲು ಯುದ್ಧಗಳನ್ನು ಮಾಡುತ್ತಿದ್ದರು. ಈ ರೀತಿಯ ಯುದ್ದಗಳಲ್ಲಿ ಸಾಮಾನ್ಯ ಸೈನಿಕರು ಯಥೇಚ್ಚವಾಗಿ ಮರಣಿಸುತ್ತಿದವರು ಅಂತವರ ನೆನಪಿಗಾಗಿ ವೀರಗಲ್ಲುಗಳನ್ನು ಹಾಕಿಸುವುದು ಸಾಮಾನ್ಯವಾಗಿದ್ದ ಕೆಲವೊಂದು ವೀರಗಲ್ಲುಗಳಲ್ಲಿ ಶಾಸನಗಳನ್ನು ಸಹ ಹಾಕಿರುವುದುಂಟು. ಈ ಶಾಸನ ಉಲ್ಲೇಖಿತ ಅಂಶಗಳಿಂದ ನಮಗೆ ಮಹತ್ತರ ಐತಿಹಾಸಿಕ ಅಂಶಗಳೂ ದೊರತು ಪ್ರಾಚೀನ ರಾಜಕೀಯ ಕಾಲಾನುಕ್ರಮಣಿಕೆಗೆ ಸಹಾಯವಾಗಿವೆ. ಈ ದೃಷ್ಟಿಯಲ್ಲಿ ಗಮನಹರಿಸಿದಾಗ ಕ್ರಿ ಶ 9 ನೇ ಶತಮಾನದ ಅರಕೆರೆಯ ವೀರಗಲ್ಲು ಶಾಸನವು ಗಂಗರ ದೊರೆ ಎರೆಗಂಗನು ಮತ್ತು ಆತನ ಸಾಮಂತ ಅಧಿಕಾರಿ ಮುತ್ತರನು ನೊಳಂಬರ ವಿರುದ್ದ ನಡೆದ ಕಲಿಕಟ್ಟೆ ಕದನದಲ್ಲಿ ಮರಣಿಸಿದವರ ಬಗ್ಗೆ ತಿಳಿಸುತ್ತದೆ. ಕ್ರಿ ಶ 971ರ ನೆರ್ಲಿಗೆ ಗ್ರಾಮದ ವೀರಗಲ್ಲು ಶಾಸನವು ಗಂಗರ 2ನೇ ಮಾರಸಿಂಹನು ನೊಳಂಬರ ವಂಶವನ್ನು ನಾಶಮಾಡಿದೆನೆಂದು ಮತ್ತು ಇವರ ಹೋರಾಟದಲ್ಲಿ ಅನವಸಯ್ಯ ಎಂಬುವವನು ಮರಣಿಸಿದ ಬಗ್ಗೆ ಹಾಗೂ ಉಲ್ಲೇಖಿಸಿದೆ. ದಬ್ಬೆ ಅಗ್ರಹಾರದ ಕ್ರಿ ಶ 1138 ರ ವಿಷ್ಣುವರ್ಧನ ಕಾಲದ ವೀರಗಲ್ಲು ಶಾಸನವು ವಿಷ್ಣುವರ್ಧನನು ತುಂಗಭದ್ರಾ ನದಿಯನ್ನು ದಾಟಿ ಹಾನಗಲ್ ಕೋಟೆಯನ್ನು ಮುತ್ತಿಗೆ ಹಾಕಿದ ಬಗ್ಗೆ ತಿಳಿಸುತ್ತದೆ. ಕಟ್ಟೆ ಸೋಮನಹಳ್ಳಿಯ ಕ್ರಿ ಶ 1276ರ 3ನೇ ನರಸಿಂಹನ ಕಾಲದ ವೀರಗಲ್ಲು ಶಾಸನವು ಸೇವುಣರ ಸೈನ್ಯದ ಮುಖ್ಯಸ್ಥ ಸಾಳುವ ತಿಕ್ಕಮನ ಜೊತೆಗೆ ಜೆಯಿದೇವ ಮತ್ತು ಹರಿಪಾಳೆಯ್ಯರು

ಗುಣಗೆನಯಿಂದ ದ್ವಾರಸಮುದ್ರಕ್ಕೆ ದಾಳಿಗೆ ಬಂದಾಗ 3ನೇ ನರಸಿಂಹನ ಅಧಿಕಾರಿಗಳಾಧ ಮಹಾ ಪ್ರಧಾನ ಚಿಕ್ಕಕೇತಯ್ಯ ದಂಡನಾಯಕ, ಮಾಂಡಳೀಕ ಗಂದಾವರಣ ನಂಜಯ್ಯನ ಮಗ ಗುಲ್ಲಯ್ಯನು ಬೆಳವಾಡಿಯಿಂದ ದುಮ್ಮಿತನಕ ಸೋಲಿಸಿ ಹಲವರನ್ನು ಕೊಂದ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ ಶ 1282ರ ಮರುಸು ಗ್ರಾಮದ ವೀರನರಸಿಂಹ ಕಾಲದ ಶಾಸನದಲ್ಲಿ ರಾಮನಾಥರ ಮೇಲೆ ಕೊಂಡನಾಯಕ ದಂಡೆತ್ತಿ ಬಂದ ಬಗ್ಗೆ ಉಲ್ಲೇಖವಿದೆ. ಅಲ್ಲದೆ ಕಲುಂಡಿ ಗ್ರಾಮದ ಕ್ರಿ ಶ 1331ರ ವೀರಬಲ್ಲಾಳನ ಕಾಲ ವೀರಗಲ್ಲು ಶಾಸನವು ತುರಕರ (ಮುಸ್ಲಿಂ) ದಾಳಿ ಮಾಡಿದ ಬಗ್ಗೆ ತಿಳಿಸುತ್ತದೆ. ಹೀಗೆ ವೀರಗಲ್ಲು ಶಾಸನಗಳು ಹಳ್ಳಿಗಳ ಕಾಳಗದ ಮಾಹಿತಿ ಮಾತ್ರವಲ್ಲವಾ ಕೋಟೆಕಾಳಗ ಹಾಗೂ ಮಹತ್ತರ ಯುದ್ದಗಳ ಬಗ್ಗೆ ಬೆಳಕು ಚೆಲ್ಲಿರುವುದನ್ನು ನಾವು ಕಾಣಬಹುದಾಗಿದೆ.

**7. ಆತ್ಮಬಲಿಯ ವೀರಗಲ್ಲು ಶಾಸನಗಳು:** ಪ್ರಾಚೀನ ಕರ್ನಾಟಕದಲ್ಲಿ ವ್ಯಕ್ತಿಗಳು ತಮ್ಮ ಪ್ರಾಣವನ್ನು ತಾವೇ ತೆಗೆದುಕೊಳ್ಳುವ ಕೆಲವು ಪದ್ಧತಿಗಳಿದ್ದವು ಇವುಗಳನ್ನು ನಾವು ಆತ್ಮಬಲಿ (ದೇಹತ್ಯಾಗ) ಎಂದು ಕರೆದಿದ್ದೇವೆ. ಇಲ್ಲಿಯೂ ಸಹ ಅವರ ಉತ್ಕಟವಾದ ಮೋಕ್ಷಾಪೇಕ್ಷೆಯನ್ನೂ, ಅಸೀಮವಾದ ಧೈರ್ಯ, ನಿಷ್ಠೆ, ಸ್ವಾಮಿಭಕ್ತಿಗಳನ್ನೂ ಕಾಣಬಹುದು. ಈ ಆತ್ಮಬಲಿಗಳಲ್ಲಿ ಕೆಲವು ಪೂರ್ಣವಾಗಿ ಧಾರ್ಮಿಕವಾದವು. ಇನ್ನೂ ಕೆಲವು ಉದಾತ್ತವಾದ ಪ್ರೀತಿ ಪ್ರೇಮವನ್ನು ಸ್ವಾಮಿನಿಷ್ಠೆಯನ್ನೂ ಎತ್ತಿ ತೋರಿಸತಕ್ಕವು. ಈ ರೀತಿಯಲಿ ಕ್ರಿ.ಶ. 10ನೇ ಶತಮಾನದ ಮುತ್ತಿಗೆ ಗ್ರಾಮದ ವೀರಗಲ್ಲು ಶಾಸನವು ಗಂಗರಾಜ ನೀತಿಮಾರ್ಗ ರಾಚಮಲ್ಲ ಪೆರ್ಮನಾಡಿ ಎಂದು ಉಲ್ಲೇಖಿಸಿದ್ದು, ಬಹುಶಃ ಈತ 2ನೇ ರಾಚಮಲ್ಲ ಇರಬಹುದಾಗಿದ್ದು ಈತನೂ ಕೊಂಬಾಲೆ ಎಂಬ ಸ್ಥಳದಲ್ಲಿ ಮರಣಿಸಿದಾಗ ಮುಲ್ಲಗೆಯ (ಮುತ್ತಿಗೆ) ಎರೆಯಪ್ಪರನು ಬೆಂಕಿಗೆ ಬಿದ್ದು ಆತ್ಮಾಹುತಿ ಮಾಡಿಕೊಂಡ ಬಗ್ಗೆ ಉಲ್ಲೇಖಿಸಿದೆ. ಇಂಟಿತೊಳಲು ಗ್ರಾಮದ ಹೊಯ್ಸಳರ ಕಾಲದ ವೀರಗಲ್ಲು ಶಾಸನವು 1ನೇ ನರಸಿಂಹ ದೇವನ ಪಟ್ಟದರಸೀ (ಪತ್ನಿ) ಬಮ್ಮಲದೇವಿ ಸ್ವರ್ಗಸ್ಥೆಯಾದಗ ಜೋಳವಾಳಿಗೆ ಸೇವಕನಾದಂತಹ ಸಿರಿವಳ ಚಾಗಾವುಡನು ಸಹ ಸುರಲೋಕ ಪ್ರಾಪ್ತನಾದನು. ಜೋಳವಾಳಿ (ಜೋಳ+ಪಾಳಿ= ಅನ್ನದ ಋಣ) ಅಂದರೇ ಜೋಳ ಒಂದು ರೀತಿಯ ಧಾನ್ಯ, ಪಾಳಿ ಅಂದರೇ ಕರ್ತವ್ಯ, ಕ್ರಮ ಎಂಬರ್ಥವನ್ನು ಕೊಡುತ್ತದೆ, ಅನ್ನವನ್ನು ಕೊಟ್ಟು ಸಾಕಿದ ಒಡೆಯನಿಗೆ ಕಷ್ಟ ಬಂದಾಗ ಅವನಿಂದ ಉಪಕೃತನಾಗಿರುವ ವ್ಯಕ್ತಿಯು ಒಡೆಯನಿಗೆ ಸಹಾಯಮಾಡಬೇಕು; ಯುದ್ಧವು ಒದಗಿದಾಗ ಅವನ ಪರವಾಗಿ ಹೋರಾಡಬೇಕು. ಜೋಳವಾಳಿ ಎಂಬದು ಕರ್ತವ್ಯವನ್ನು ಸೂಚಿಸುತ್ತದೆ, ಅದರೆ ಆತ್ಮಹತ್ಯೆಯನ್ನು ಸೂಚಿಸುವುದು ವೇಳೆವಾಳಿಯಲ್ಲಿ ಮಾತ್ರ, ಅದರೆ ಇಲ್ಲಿ ಜೋಳವಾಳಿಯಲ್ಲಿಯೇ ಆತ್ಮಾಹುತಿಯನ್ನು ತೋರಿಸಿರುವುದು ವಿಶೇಷವಾಗಿರುವುದನ್ನು ನಾವು ಕಾಣಬಹುದಾಗಿದೆ.

**8. ಊರಳಿವಿನ ಶಾಸನ ವೀರಗಲ್ಲುಗಳು:** ಪ್ರಾಚೀನ ಕಾಲದಲ್ಲಿ ಒಂದು ಊರನ್ನು ಶತ್ರು ಸೇನೆಯವರು ಕಳ್ಳರು ಅಕ್ಕ ಪಕ್ಕದ ಊರಿನವರು ರಾಜಕೀಯ ಅಥವಾ ಸಾಮಾಜಿಕ ಕಾರಣಗಳಿಗಾಗಿ ಮುತ್ತಿದಾಗ ಅದು ಊರಿಗೆ ಬಂದೊದಗಿದ ನಾಶದ ಪರಿಸ್ಥಿತಿ ಎಂದು ಪರಿಗಣಿಸಿ ಆ ಊರಿನ ಅಧಿಕಾರಿಗಳು ವೀರರು ರಕ್ಷಣೆಗಾಗಿ ಹೋರಾಟಕ್ಕೆ ಮುಂದಾಗುತ್ತಿದ್ದರು ಈ ಹೋರಾಟದಲ್ಲಿ ಮಡಿದ ವೀರರ ಸ್ಮರಣಾರ್ಥ ವೀರಗಲ್ಲುಗಳನ್ನು ಹಾಕಿಸಿ ಮತ್ತು ಅವರ ಸಂಬಂಧಿಕರಿಗೆ ಕೊಡುಗೆಯನ್ನು ನೀಡುತ್ತಿದ್ದರು ಇಂತಹ ಸನ್ನಿವೇಶವನ್ನು (ಊರಳಿವು) ಎಂದು ಶಾಸನಗಳು ದಾಖಲಿಸಿವೆ. ಈ ತರಹದ ವೀರಗಲ್ಲನ್ನು ಶಿಲ್ಪದ ಆದಾರದ ಮೇಲೆ ಗುರುತಿಸುವುದು ಕಷ್ಟ ಸಾಧ್ಯ. ಆದ್ದರಿಂದ ಶಾಸನದ ಪಾಠದ ಮೂಲಕವೇ ಗುರುತಿಸಬೇಕಾಗುತ್ತದೆ. ಕ್ರಿ.ಶ.985ರ ಕಾಲದ ನಲ್ಲೂರು ಶಾಸನವು ಬೇಡರ ಭೀರಮ್ಮ ಎಂಬುವವನು ನಲ್ಲೂರು ಗ್ರಾಮದ ಮೇಲೆ ಹಸು ದರೋಡೆಗೆ ದಾಳಿ ಮಾಡಿದಾಗ ದೊರೆ ಗುಂಡಯ್ಯ ಎಂಬುವವನು ಕುದುರೆಯೊಂದಿಗೆ ಹೋಗಿ ಗಹೋರಾಡಿ ಮರಣಿಸಿದರ ಬಗ್ಗೆ ಉಲ್ಲೇಖಿಸಿದೆ.

**9. ಬೇಟೆಯ ಶಾಸನ ವೀರಗಲ್ಲು:** ಪ್ರಾಚೀನ ಕಾಲದಿಂದ ಪ್ರಾಣಿ ಬೇಟೇಯಾಡುವ ಪದ್ದತಿಯನ್ನು ಮಾನವನು ರೂಢಿಸಿಕೊಂಡು ಬಂದಿದ್ದಾನೆ. ಕೆಲವು ಪ್ರಾಣಿಗಳನ್ನು ಆಹಾರಕ್ಕಾಗಿ ಮತ್ತೇ ಕೆಲವರು ಮೋಜಿಗಾಗಿ, ಬೇಟೆಯಾಡುತ್ತಿದ್ದರು. ಅಲ್ಲದೇ ಕೆಲವು ಪ್ರಾಣಿಗಳು ಊರಿಗೆ ನುಗ್ಗಿ ಜನರಿಗೆ ಜಾನುವಾರುಗಳಿಗೆ ತೊಂದರೆ ಕೊಡುವುದನ್ನು ತಡೆಯಲು ಆ ಗ್ರಾಮದ ವೀರರು ಅಂತಹ ಪ್ರಾಣಿಗಳನ್ನು ಬೇಟೆಯಾಡಿ ಕೊಂದು ಹಾಕಿದ ಕೊಲ್ಲಲು ಹೋಗಿ ತಾವೇ ಮರಣವನ್ನಪಿದ್ದನ್ನು ಈ ವೀರಗಲ್ಲುಗಳಲ್ಲಿ ಕಾಣಬಹುದು. ಈ ರೀತಿಯಲ್ಲಿ ಕ್ರಿ.ಶ. 1192ರ ಬೆಂಡೆಕೆರೆಯವರ ವೀರಗಲ್ಲು ಶಾಸನ ಪ್ರಕಾರ ಬೀಚೆಯ ನಾಯಕನೂ ಹುಲಿಯೊಂದಿಗೆ ಹೋರಾಡಿ ಮಡಿದನು. ನಂತರ ಆತನ ಮಗ ಪರೋಕ್ತ ವಿನಿಯಂ ಮಾಡಿ ವೀರಗಲ್ಲು ಹಾಕಿಸಿದ್ದನು ಕಾಣಬಹುದಾಗಿದೆ. ಈ ರೀತಿಯ ವೀರಗಲ್ಲು ಶಾಸನ ಉಲ್ಲೇಖಿತ ವೀರಗಲ್ಲು ಕಡಿಮೆಯಿದ್ದು ಶಾಸನ ಉಲ್ಲೇಖದಲ್ಲಿದೇ ವೀರಗಲ್ಲುಗಳು ಸಾಕಷ್ಟು ದೊರೆಯುತ್ತದೆ.

**ಶಾಸನ ಸ್ಮಾರಕ ಶಿಲ್ಪಗಳ ಧಾನ ಕಾರ್ಯ ವಿಷಯಗಳು:** ವೀರನ ಗಡಿಕಾಳಗ, ಕೋಟೆಕಾಳಗ, ಯುದ್ಧ, ಪೆಣ್ಬುಯಲ್, ಊರಳಿವು ಇಂತಹ ಘಟನೆಗಳು ಸಂಭವಿಸಿ ಮರಣಿಸಿದಾಗ ವೀರರ ಕುಟುಂಬಕ್ಕೆ ರಾಜ, ಅಧಿಕಾರಿಗಳು ಅಥವಾ ಗ್ರಾಮಸ್ಥರು ಧಾನ ನೀಡಿರುವುದು ಕಂಡು ಬರುತ್ತದೆ. ಈ ರೀತಿಯಲ್ಲಿ ನಮಗೆ ಹಾಸನ ಜಿಲ್ಲೆಯಲ್ಲಿರುವ ಸಹ ಸಾಕಷ್ಟು ಉದಾಹರಣೆಗಳು ದೊರೆತಿದ್ದು ಅದರಲ್ಲೂ ಗಂಗರ ಕಾಲದಲ್ಲಿನ ವೀರಗಲ್ಲು ಶಾಸನಗಳಲ್ಲಿ ಅತಿ ಹೆಚ್ಚು ಧಾನ ಪ್ರಕ್ರಿಯೆ ನಡೆದಿರುವುದು ಗಮನಿಸಹುದು. ಕ್ರಿ. ಶ. 907ರ ಗಂಗೂರು ವೀರಗಲ್ಲು ಶಾಸನದಲ್ಲಿ ರಾಜ ಎರೆಗಂಗನು ತನ್ನ 37ನೇ ವಾರ್ಷಿಕ ಆಳ್ವಿಕೆಯ ಕಾಲದಲ್ಲಿ ಮರಣಿಸಿದಂತಹ ವೀರನ (ವೀರನ ಮರಣಿಸಿದ ಕಾರಣ ಮತ್ತು ಹೆಸರು ಅಸ್ಪಷ್ಟ) ಕುಟುಂಬಕ್ಕೆ ಧಾನ ನೀಡಿದ ಬಗ್ಗೆ ತಿಳಿಸುತ್ತದೆ ಕ್ರಿ ಶ 971ರ ಕರಗಡದ ವೀರಗಲ್ಲು ಶಾಸನದಲ್ಲಿನ ಪ್ರಕಾರ ಉಚ್ಚಂಗಿಯ ಕೋಟೆ ಕದನದಲ್ಲಿ ಭಾಸ ಗಾವುಂಡ ಮರಣಿಸಿದಾಗ ಆತನ ಕುಟುಂಬಕ್ಕೆ 5 ಕಂಡುಗ ಭೂಮಿಯನ್ನು ಗಂಗರ ಎರಡನೇ ಮಾರಸಿಂಹನು ಧಾನ ನೀಡಿದ ಬಗ್ಗೆ ತಿಳಿಸುತ್ತದೆ. ನೆರ್ಲಿಗೆಯ ಕ್ರಿ.ಶ.972ರ ಶಾಸನದಲ್ಲಿ ಗಂಗರ ದೊರೆ 2ನೇ ಮಾರಸಿಂಹನು ನೂಳಂಬರ ವಿರುದ್ಧದ ಹೋರಾಟದಲ್ಲಿ ಮರಣಿಸಿದ ಅನವನಸಯನ ಮಗನಿಗೆ ದತ್ತಿ ನೀಡಿದನು. ಅಲ್ಲದೇ ಈತನಿಗೆ ನೆರ್ಲಿಗೆ ಗ್ರಾಮವನ್ನು ದತ್ತಿಯಾಗಿ ನೀಡಿದನು. ಅಲ್ಲದೇ ಈ ವೀರಗಲ್ಲನ್ನು ಕೊರೆದವರಿಗೆ 10 ಕೊಳಗದ ಭೂಮಿಯನ್ನು ನೀಡಿದ ಮಾಹಿತಿಯಿದೆ. ಹನುಮಾನಹಳ್ಳಿಯ ವಿಷ್ಣುವರ್ದನ ಕಾಲದ ವೀರಗಲ್ಲು ಶಾಸನದಲ್ಲಿ ತರಣಿಯ ಮೈದವೆಗ್ಗಡೆ ದಾರಿಯಲ್ಲಿನ ಗಲಾಟೆಯಲ್ಲಿ ಮರಣಿಸಿದಾಗ ಒಟ್ಟೆಯನಾಯಕ ವೀರಗಲ್ಲನ್ನು ನಿಲ್ಲಿಸಿ ಹಾಗೂ ಮೈದವೇಗ್ಗೇಡೆಯ ಹೆಸರೆನಲ್ಲಿ ದೇವಾಲಯ ನಿರ್ಮಿಸಿ 2 ಸಲಗೆಯ ಬೆಧ್ದಲ (ಅಂದರೆ ನೀರಾವರಿ ಜಮೀನು) 10 ಕೊಳಗದ ದಾನ್ಯ ಬಿತ್ತುವ ಭೂಮಿಯನ್ನು ನೀಡಿದಂತಹ ವಿವರವಿದೆ. ಕ್ರಿ.ಶ. 1017ರ ಕಿತ್ತನಕೆರೆ ವೀರಗಲ್ಲು ಶಾಸನದಲ್ಲಿ ಹೆಣ್ಣುಮಕ್ಕಳ ರಕ್ಷಣೆಯಲ್ಲಿ ಕಳ್ಳರೊಂದಿಗೆ

ಹೋರಾಡಿ ಮಡಿದ ಸೋಮಯ್ಯ ಮತ್ತು ಅವನ ಮಾವ ಬೆಚ್ಚಯ್ಯನ ನೆನಪಿಗಾಗಿ ಸೋಮಯ್ಯನ ತಮ್ಮಂದಿರಾದ ಬೆಂಚಯ್ಯ ಮತ್ತು ಕಲ್ಲಯ್ಯ ಹಾಗೂ ಕಟ್ಟದಹಳ್ಳಿಯ ಮಾದಿಗೌಡನು ಸೇರಿ ವೀರಗಲ್ಲು ಮಾಡಿಸಿ ಆ ವೀರಗಲ್ಲಿಗೆ ನೈವೇದ್ಯ, ಹೂ, ಪಾತ್ರೆ ಖರ್ಚಿಗೆ ಭೂಮಿಯನ್ನು ಧಾರಾಪೂರ್ವಕವಾಗಿ ನೀಡಿದುದರ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1174ರ ಹೊನ್ನಾವರ ವೀರಗಲ್ಲು ಶಾಸನದಲ್ಲಿ ಹೊನ್ನಾವರ ಮತ್ತು ನಿರ್ಗುಂದ ಗಡಿಕಾಳಗದಲ್ಲಿ ಮರಣಿಸಿದಂತಹ ಭೀಮನ ಮಗ ಹೊನ್ನಾಗಾವುಂಡನ ಕುಟುಂಬಕ್ಕೆ ಗ್ರಾಮದ ಜನರು ಮತ್ತು ಮುಖ್ಯಸ್ಥನಾದ ಮಾಸನಗಾವುಂಡರು ಭೂಮಿಯನ್ನು ಧಾನವಾಗಿ ಸರ್ವಮಾನ್ಯವಾಗಿ ಕೊಟ್ಟ ಬಗೆ ತಿಳಿಸುತ್ತದೆ. ಅಗ್ಗಡಲಿನ ಕ್ರಿ.ಶ. 1195ರ ಶಿಲ್ಪಶಾಸನವು ಐಯ್ಯರೇಹಳ್ಳಿ ಮತ್ತು ಅಗ್ಗಡಲು ಗಡಿ ಗಲಾಟೆಯಲ್ಲಿ ಮರಣಿಸಿದ ಬಳುಗುಪ್ಪೆಯ ದಾಳಿಗಾವುಡನ ಕುಟುಂಬದಲ್ಲಿನ ಆತನ ತಮ್ಮ ಸತೀಗಾವುಡನಿಗೆ ಕೊಲ್ಲಬಗಾವುಡ ಮತ್ತು ಬೊಕ್ಕಗಾವುಡ ಇನ್ನೂರು ಮಾರು ಭೂಮಿಯನ್ನು ನೀಡಿರುವ ಬಗ್ಗೆ ಹಾಗೂ ಹೆಂಜೊಳಿಗೆಯ ಕ್ರಿ.ಶ. 1242ರ ಕಾಲದ ಶಾಸನವು ಗಾವುಡ ಮಗ ಭಯಚಯ್ಯ ಮರಣಿಸಿದ್ದಕ್ಕಾಗಿ ನಾಲ್ಕು ಗುಳ ನೀರಾವರಿ ಜಮೀನು ನೀಡಿದ ಬಗ್ಗೆ ಮಾಹಿತಿಯಿದೆ. ತಗರೆಯ ಕ್ರಿ.ಶ. 1301ರ ಶಾಸನದಲ್ಲಿ ವೀರ ಬಲ್ಲಾಳನು ಹೆರ್ಭಟ್ಟನಾ ಬಚ್ಚಯನಾಯಕನ ಮೇಲೆ ದಂಡೆತ್ತಿ ಹೋದಾಗ ತನ್ನ ಕಡೆಯಿಂದ ತಗರೆನಾಡ ಮಾದೀಗಾವುಂಡರು ಹೊರಾಡಿ ಮರಣಿಸಿದಾಗ ಮೂರನೇ ಬಲ್ಲಾಳನು ತಗರೆಯಲ್ಲಿ ಒಂದು ಹಣದ ಭೂಮಿಯನ್ನು ಕೊಟ್ಟ ಬಗ್ಗೆ ಉಲ್ಲೇಖಿಸಿದೆ. ಹಾಗೇಯೇ ಕಲ್ಲುಂಡಿಯ ಕ್ರಿ ಶ 1331ರ ಶಾಸನವು ತುರುಕರು (ಮುಸ್ಲಿಂರು) ಗೊರವನ ಕಲ್ಲಿಗೆ ಬಂದಾಗ ಲಿಂಗದ ಹಳ್ಳಿಯ ಬಲಗೌಡನ ಮಗ ಮಾರಗೌಡನು ಹೋರಾಡಿ ಕುದುರೆಯನ್ನು ಸೆರೆಹಿಡಿದು ಮರಣಿಸಿದನು ಆಗ ಕಾಮಯ್ಯ ದಂಡನಾಯಕ (ಮಹಾಪ್ರಧಾನ) ನೆತ್ತರು ಕೊಡುಗೆಯಾಗಿ ಭೂಧಾನವನ್ನು ಕೊಟ್ಟು ವೀರಗಲ್ಲನ್ನು ಹಾಕಿಸಿದನು.

**ಸ್ಥಳೀಯ ಆಡಳಿತಾಧಿಕಾರಿಗಳ ಮಾಹಿತಿ:** ಪ್ರಾಚೀನ ಕಾಲದಲ್ಲಿ ರಾಜ್ಯವು ರಾಜನಿಂದ ಕೇಂದ್ರಿತವಾಗಿದ್ದು ಆತನ ಅಧೀನದಲ್ಲಿ ಮಹಾಪ್ರಧಾನ ದಂಡನಾಯಕ, ಮಹಾಮಂಡಲೇಶ್ವರ, ಮಂಡಲೇಶ್ವರ, ನಾಡಗಾವುಂಡ, ಪ್ರಭುಗಾವುಂಡರು, ಸ್ಥಾನಿಕರು, ಮಹಾಜನಗಳೂ ಆಡಳಿತ ಭಾಗವಹಿಸಿ ರಾಜ್ಯದ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ನ್ಯಾಯಿಕ ಕಾರ್ಯಗಳಲ್ಲಿ ತಮ್ಮದೇ ಆದಂತಹ ಸೇವೆಯನ್ನು ಸಲ್ಲಿಸಿರುವುದನ್ನು ಶಾಸನ ಮತ್ತು ಲಿಖಿತ ಆಧಾರಗಳಿಂದ ತಿಳಿಯಬಹುದು. ಈ ರೀತಿಯಲ್ಲಿ ಹಾಸನ ಜಿಲ್ಲೆಯ ಶಾಸನ ಸ್ಮಾರಕ ಶಿಲ್ಪಗಳಲ್ಲಿಯೂ ಅನೇಕ ಆಡಳಿತಾದಿಕಾರಿಗಳ ಬಗ್ಗೆ ಬೆಳಕು ಚೆಲ್ಲಿರುವುದನ್ನು ಕಾಣಬಹುದು. ಕ್ರಿ ಶ. 9ನೇ ಶತಮಾನದ ಗಂಗರ ಕಾಲದಲ್ಲಿ ಸತ್ಯವ್ಯಾಕ್ಯ ಪೆರ್ಮಾಡಿ ಎರೆಯಗಂಗನ (ಎರೆಯಪ್ಪರಸ) ಸಾಮಂತ ಅಧಿಕಾರಿಯಾದ ಮುತ್ತರನು ಅಸಂಧಿ ನಾಡನ್ನು ಆಳುತ್ತಿದ್ದ ಬಗ್ಗೆ ಉಲ್ಲೇಖಿಸಿದೆ. ಕ್ರಿ ಶ. 1022–1033ರ ಕಾಲಮಾನದ ರಾಜೇಂದ್ರಪುರ ವೀರಗಲ್ಲು ಶಾಸನವು ನೃಪಕಾಮನ ಪಡೆವಲ ಎಂಬ ಅಧಿಕಾರಿ ಮತ್ತು ಹೆಗ್ಗಡೆ ಎಂಬ ಅಧಿಕಾರಿಯ ಹೆಸರನ್ನು ಉಲ್ಲೇಖಿಸಿದೆ. ಹೊಲಹಳ್ಳಿಯ 11ನೇ ಶತಮಾನದ ವೀರಗಲ್ಲು ಶಾಸನವು ಮಹಾನ್ ಮಂಡಲೇಶ್ವರ ಎಂದಿದ್ದೂ ಇದೂ ಅರಸನ ಅಧೀನ ಆಡಳಿತಗಾರ ಅಥವಾ ಸಾಮಂತನಾದ ಜಯಸಿಂಘ ಮಹಾರಾಜ ಎಂದು ಉಲ್ಲೇಖಿಸಿದೆ. ಕ್ರಿ.ಶ. 281ರ ಸುಗ್ಗಲೂರಿನ ವೀರಗಲ್ಲು ಶಾಸನ ಕಲಿದೇವರ ಸ್ಥಾನಿಕರ ಬಗ್ಗೆ ಹಾಗೂ ಅಲ್ಲಿನ ಸಿಧಾಯಿ ಎಂಬ ತೆರಿಗೆ ಬಗ್ಗೆ (ಅಂದರೆ ನಿಯಮಿತವಾಗಿ ಕೊಡಬೇಕಾದಂತಹ ನಿರ್ದಿಷ್ಟ ಹಣ ಅಥವಾ ಧಾನ್ಯದ ರೂಪ)ಅಥವಾ ಕರದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1331ರ ಕಲ್ಲುಂಡಿ ವೀರಗಲ್ಲು ಶಾಸನವು ವೀರಬಲ್ಲಾಳನ ಮಹಪ್ರಧಾನ ಅಂದರೆ ರಾಜ್ಯದ ಮುಖ್ಯ ಅಧಿಕಾರಿ ಅಥವಾ ಪ್ರಧಾನಮಂತ್ರಿಯಾದ ಕಾಮಯ್ಯ ದಂಡನಾಯಕನ ಬಗ್ಗೆ ತಿಳಿಸುತ್ತದೆ. ಈ ರೀತಿಯಲ್ಲಿ ಈ ಭಾಗದಲ್ಲಿ ಹೆಗ್ಗಡೆ (ಗ್ರಾಮದ ಮುಖ್ಯಸ್ಥರು), ಸ್ಥಾನಿಕರು ಎಂದರೆ ಸ್ಥಾನದ ಅಧಿಪತಿ ಎಂದರ್ಥ (ದೇವಾಲಯದ ಆಡಳಿತ ಧಾನದತ್ತಿಯ ಕಾರ್ಯನಿರ್ವಹಿಸುತ್ತಿದ್ದವರು ಮತ್ತು ದೇವಾಲಯದ ಮುಖ್ಯಅರ್ಚಕರು), ಮಹಾನ್ ಮಂಡಳೇಶ್ವರರು (ಸಾಮಂತರರು), ಮಹಾಪ್ರಧಾನ, ದಂಡನಾಯಕ (ಸೈನ್ಯದಮುಖ್ಯಸ್ಥ), ಗಾವುಂಡ (ಗ್ರಾಮದ ಯಜಮಾನ), ಮಹಾಜನ (ಬ್ರಾಹ್ಮಣರು), ಎಂಬ ವರ್ಗಗಳ ಅಧಿಕಾರಿಗಳ ಮತ್ತು ಅವರ ಕರ್ತವ್ಯಗಳ ಬಗ್ಗೆ ಈ ವೀರಗಲ್ಲುಗಳು ಶಾಸನಗಳಲ್ಲಿಯೂ ಉಲ್ಲೇಖಿತವಾಗಿರುವುದನ್ನು ನಾವು ಕಾಣಬಹುದು.

**ಸ್ಮಾರಕ ಶಿಲ್ಪ ಹಾಕಿಸಿದವರು ವಿಚಾರ:** ವೀರಗಲ್ಲು ಸ್ಮಾರಕ ನಿರ್ಮಿಸಿದವರ ಬಗ್ಗೆ ತಿಳಿಯಬೇಕಾದರೆ ಅದು ಕೇವಲ ಶಾಸನವಿರುವ ವೀರಗಲ್ಲುಗಳಿಂದ ಮಾತ್ರವಾಗಿರುತ್ತದೆ. ಈ ರೀತಿಯಲ್ಲಿ ಪ್ರಮುಖವಾಗಿ ಶಾಸನ ಉಲ್ಲೇಖಿತ ವೀರಗಲ್ಲು ಗಮನಿಸಿದಾಗ ವೀರನ ದಾಯಾದಿಗಳು, ಹೆಂಡತಿ, ಮಗ, ಹಾಗೂ ಊರಿನ ಪ್ರಮುಖರಾದ ಹೆಗ್ಗಡೆಗಳು, ಇತರ ಅಧಿಕಾರಿಗಳು, ರಾಜರು ಹಾಕಿಸಿದಂತಹ ಉದಾಹರಣೆಗಳನ್ನು ಕಾಣಬಹುದಾಗಿದೆ. ಈ ದೃಷ್ಟಿಕೋನದಲ್ಲಿ ಕಿತ್ತನೆಕೆರೆಯ ಕ್ರಿ.ಶ. 1117 ವೀರಗಲ್ಲು ಶಾಸನದಲ್ಲಿ ವೀರನ ತಮ್ಮಂದಿರು, ಆತನ ನೆನಪಿಗೆ ಹಾಕಿಸಿರುವುದನ್ನು ಕಾಣಬಹುದು. ಬೆಂಡೆಕೆರೆಯ ಕ್ರಿ.ಶ. 1192ರ ವೀರಗಲ್ಲು ಶಾಸನ ವೀರನ ನೆನಪಿಗಾಗಿ ಆತನ ಮಗ ಪರೋಕ್ಷವಿನಯಂ ಮಾಡಿಸಿ ವೀರಗಲ್ಲು ನೆಡೆಸಿದ ಉಲ್ಲೇಖವಿದೆ. ಹಾಗೇಯೇ ಇಂಟಿತೊಳಲು ವೀರಗಲ್ಲು ಶಾಸನವು ಸಹ ಜೋಳವಾಳಿಗೆ ಸೇವಕನಾದ ಚಾಗಗಾವುಂಡನು ನರಸಿಂಹದೇವನ ಪಟ್ಟದರಸಿ ಬಮ್ಮಲದೇವಿ ಸ್ವರ್ಗಸ್ಥೆಯಾದಾಗ ಈತನೂ ಆತ್ಮಾಹುತಿ ಮಾಡಿಕೊಂಡನು, ಆಗ ಆತನ ಮಗ ಅಣ್ಣಾಗಾವುಂಡನು ಪರೋಕ್ಷವಿನಯಂ ಮಾಡಿಸಿದನು ಎಂಬುದು ಸಹ ಒಂದು ಮಹತ್ತರ ವಿಷಯವಾಗಿದೆ. ಆಲೂರಿನ ವೀರಗಲ್ಲು ಶಾಸನದಲ್ಲಿ ತೆಗರೆನಾಡಿನ ಆಲೂರು ಮಾಚಿಗಾವುಂಡ ಕದನದಲ್ಲಿ ಮರಣಿಸಿದಾಗ ಆತನ ಹೆಂಡತಿ ಚಟ್ಟಬ್ಬೆ ವೀರಗಲ್ಲು ಹಾಕಿಸಿದಳು. ಹಾಗೇಯೇ ಅರಸೀಕೆರೆ ವೀರಗಲ್ಲಿನ ಶಾಸನವು ಕಳ್ಳರೊಂದಿಗೆ ಹೋರಾಡಿ ಮಡಿದ ವೀರಶೆಟ್ಟಿ ಎಂಬುವವನು ಹೆಂಡತಿ ಕೇತಬ್ಬೆ ವೀರಗಲ್ಲನ್ನು ಹಾಕಿಸಿದ ಮಾಹಿತಿಯನ್ನು ಕಾಣಬಹುದಾಗಿದೆ. 14ನೇ ಶತಮಾನದ ತಳಲೂಕೆರೆಯ ವೀರಗಲ್ಲು ಶಾಸನವು ಆಡಳಿತಾಧಿಕಾರಿ ಹೆಗ್ಗಡೆಯು ವೀರನ ನೆನಪಿಗೆ ನೆಟ್ಟಿದ ಕಲ್ಲಿನ ಬಗ್ಗೆ ವಿವರಿಸುತ್ತದೆ. ಅಲ್ಲದೇ ಚಿಕ್ಕಕೋಡಿಹಳ್ಳಿಯ ಚಿಕ್ಕಗಂಗವಾಡಿಯ ಅಧಿಕಾರಿ ಸೋವಿಯನಾಯಕ ಆಳುತ್ತಿದ್ದಾಗ ಪ್ರತಿಕೂಲ ಪಡೆಯ ವಿರುದ್ಧ ಹೋರಾಡಿ ಮರಣಿಸಿದನು. ಅಗ ಆತನ ಹೆಂಡತಿ ಮಾಚಿಯಕ್ಕ ವೀರಗಲ್ಲನ್ನು ಹಾಕಿಸಿ ಒಡವೆಗಳಿಂದ ಅಲಂಕರಿಸಿದಂತಹ ಉದಾಹರಣೆಗಳನ್ನು ಕಾಣಬಹುದಾಗಿದೆ.

**ಅಕ್ಷರ ಬರೆದ ಓಜ ಮತ್ತು ಶಿಲ್ಪವನ್ನು ಕೊರೆದವರ ಮಾಹಿತಿ:** ಪ್ರಮುಖವಾಗಿ ವೀರಗಲ್ಲು ಶಾಸನವನ್ನು ಗಮನಿಸಿದಾಗ ನಮಗೆ ಅಕ್ಷರವನ್ನು ಬರೆದಂತಹ ಓಜ ಮತ್ತು ಅದರ ಚಿತ್ರಿ ಪಟ್ಟಿಕೆಯನ್ನು ಕೊರೆದವರ ಮಾಹಿತಿಗಳು ಸಹ ಲಭಿಸಿವೆ. ಅದರಲ್ಲಿ ಲಿಪಿ ಬರೆದ ಓಜ ಮತ್ತು ಶಿಲ್ಪ ಕೊರೆದಂತಹವರಿಗೆ ಸರ್ವಮಾನ್ಯ ನೀಡಿದಂತಹ ಭೂಧಾನ ಹಾಗೂ ಹಣದ ಮಾಹಿತಿಯನ್ನು ಸಹ ನೀಡಿವೆ. ಈ ಮೂಲಕ ಪ್ರಾಚೀನ ಕಾಲದಲ್ಲಿನ ಓಜರ ಹೆಸರುಗಳ ಬಗ್ಗೆ ಕೆಲವು

ವೀರಗಲ್ಲು ಶಾಸನಗಳು ಮಾಹಿತಿ ನೀಡುತ್ತವೆ. ಅವುಗಳಲ್ಲಿ ಕ್ರಿ.ಶ. 971ರ ನೆರ್ಲಿಗೆ ವೀರಗಲ್ಲು ಶಾಸನದಲ್ಲಿ ಬರೆದ ಮತ್ತು ಕೆತ್ತಿದ ಓಜನ ಹೆಸರಿಲ್ಲದಿದ್ದರೂ ಆತನಿಗೆ 10 ಕೊಳಗದ ಭೂಮಿಯನ್ನು ನೀಡಲಾಗಿದೆ, ಓಜನೂ ವೀರನ ವರ್ಣಿಸಿರುವುದನ್ನು ಗಮನಿಸಿದಾಗ ಆತನ ವಿದ್ವತ್ತನ್ನು ಅರಿಯಬಹುದಾಗಿದೆ. ಹೆಂಚೂರು ವೀರಗಲ್ಲು ಶಾಸನ ಮಾಲೋಜ ಎಂಬ ಕೊರೆದ ಓಜನ ಬಗ್ಗೆ, ಮತ್ತು ಅಗ್ಗಡಲಿನ ಕ್ರಿ.ಶ.1195ರ ಶಾಸನವು ಮಾಲೋಜ ಶಿಲ್ಪಿಯ ಬಗ್ಗೆ ಮತ್ತೇ ಉಲ್ಲೇಖೀಸಿದೆ. ಆದ್ದರಿಂದ ಈ ಎರಡೂ ಗ್ರಾಮದ ವೀರಗಲ್ಲನ್ನು ಕೊರೆದ ಓಜ ಒಬ್ಬನೇ ಅಗಿರಬಹುದೆಂದು ಊಹಿಸಬಹುದಾಗಿದೆ. ಆದರೆ ಅದೇ ಅಗ್ಗಡಲಿನ ವೀರಗಲ್ಲು ಶಾಸನದ ಲಿಪಿಯನ್ನು ಬರೆದವನು ಕುಂದೂರು ರಾಯಣ್ಣ ಎಂದು ಉಲ್ಲೇಖಿಸಿದೆ. ಬಾಗೆಡೆಯ ವೀರಗಲ್ಲಿನಲ್ಲಿ ಮಾರೋಜನ ಮಗ ಮಾಕೋಜನು ಕಲ್ಲನ್ನು ಕೆತ್ತಿದ್ದವನು ಎಂದು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಗಂಗರ ಕಾಲದ ಮುತ್ತಿಗೆ ಗ್ರಾಮದ ವೀರಗಲ್ಲಿನ ಶಾಸನ ಬರೆದವರು ಪರುಸ ರಾಮಯ್ಯ ಎಂದು ಸಹ ಉಲ್ಲೇಖಿಸಿದೆ. ಈ ರೀತಿಯ ಉದಾಹರಣೆಯ ಮೂಲಕ ಚಿತ್ರ ಪಟ್ಟಿಕೆ ಮತ್ತು ಕಲ್ಲನ್ನು ಒಬ್ಬ ಪರಿಣಿತ ವ್ಯಕ್ತಿಗಳಿಂದ ಹದಗೊಳಿಸಿ ನಂತರ ಲಿಪಿಜ್ಞಾನವುಳ್ಳಾವನನ್ನು ಕರೆಯಿಸಿ ಶಾಸನ ಹಾಕಿಸಿದುದರ ಬಗ್ಗೆ ಈ ಶಾಸನಗಳು ಮಾಹಿತಿ ನೀಡುತ್ತವೆ. ಅದಕ್ಕೆ ಅವರಿಗೆ ಒಂದಿಷ್ಟು ಹಣ ಅಥವಾ ಭೂಮಿ ನೀಡುವ ಪದ್ದತಿಯನ್ನು ಸಹ ಕಾಣಬಹುದಾಗಿದೆ.

**ಶಾಸನ ಸ್ಮಾರಕ ಶಿಲ್ಪಗಳಲ್ಲಿನ ಅರ್ಥಿಕತೆಯ ಅಂಶಗಳು:** ಹಾಸನ ಜಿಲ್ಲೆಯ ಪ್ರಾಚೀನ ಕಾಲದ ಆರ್ಥಿಕ ಅಂಶಗಳನ್ನು ಗಮನಿಸಿದಾಗ ನಮಗೆ ಕೆರೆ ನಿರ್ಮಾಣ, ಭೂಮಿಯ ಅಳತೆ ಮಾಪಕಗಳು, ಧಾನ ನೀಡಿದಂತಹ ಭೂ ಪ್ರದೇಶದ ಸ್ಥಿತಿಗತಿಯ ಅಂಶಗಳನ್ನು ಒದಗಿಸುತ್ತದೆ. ಈ ಆಂಶಗಳ ಮೂಲಕ ಅಂದಿನ ಸಮಾಜದಲ್ಲಿನ ಜೀವನ ಮಟ್ಟವನ್ನು ತಿಳಿಯಬಹುದಾಗಿದೆ. ಈ ಭಾಗದ ವೀರಗಲ್ಲು ಶಾಸನಗಳು ಸಹ ನಮಗೆ ಆರ್ಥಿಕತೆಯ ಬಗ್ಗೆ ನಮಗೆ ಉತ್ತಮ ಪುರಾವೆ ಒದಗಿಸಿವೆ. 3ನೇ ನರಸಿಂಹನ ಕಾಲದ ಚಿಕ್ಕಕೋಡನಹಳ್ಳಿ ವೀರಗಲ್ಲು ಶಾಸನವು ಸೋವಿಯ ನಾಯಕ ಕೆರೆ ನಿರ್ಮಿಸಿ ಬಗ್ಗೆ ಮಾಹಿತಿಯಿದೆ. ಹಾಗೆಯೇ ಕ್ರಿ.ಶ. 1211ರ ಮಡಬಲು ಗ್ರಾಮದ ವೀರಗಲ್ಲು ಶಾಸನದಲ್ಲಿ ವೀರನ ಮರಣ ನಂತರ ಆತನ ನೆನಪಿಗೆ ಕೆರೆಯ ನಿರ್ಮಾಣ ಮಾಡಿದುದರ ಬಗ್ಗೆ ತಿಳಿಸುತ್ತದೆ. ಹೀಗೆ ಗ್ರಾಮದ ಜನರು ಆರ್ಥಿಕವಾಗಿ ಸದೃಡವಾಗಲು ಈ ಉತ್ತಮ ಕೆಲಸಗಳು ಸಹಾಯಕವಾಗಿರುವುದನ್ನು ಕಾಣಬಹುದು. ಅಲ್ಲದೇ ಭೂಮಿಯನ್ನು ಕೋಲು, ಕಂಬ, ಖಂಡುಗ, ಕೊಳಗ, ಸಲಗೆಗಳನ್ನು ಅಳತೆ ಮಾಡುವ ಮಾಪಕಗಳಾಗಿ ಬಳಿಸಿರುವುದನ್ನು ಕಾಣಬಹುದು. ನೆರ್ಲಿಗೆ ಗ್ರಾಮದ ವೀರಗಲ್ಲಿನಲ್ಲಿ 10 ಕೊಳಗದ ಭೂಮಿ ಧಾನ ನೀಡಿದ ಬಗ್ಗೆ ತಿಳಿಸಿದೆ. ಇಲ್ಲಿನ ಕೊಳಗ ಭೂಮಿ ಎಂದರೆ ಒಂದರ ಕೊಳಗದ ಧಾನ್ಯದಿಂದ ಬಿತ್ತುಬಹುದಾದ ಭೂಮಿಯಾಗಿತ್ತು. ಅಲ್ಲದೆ ಬಾಗಡೆ ಗ್ರಾಮದಲ್ಲಿನ ವೀರಗಲ್ಲಿನಲ್ಲಿ 400 ಕಂಬಗಳ ಹೂಲವನ್ನು ಧಾನ ಮಾಡಿದ ಬಗ್ಗೆ ತಿಳಿಸುತ್ತದೆ. ಕಂಬದ ಅಳತೆಯ ಮಾಪನವನ್ನು ಹೊಯ್ಸಳರ ಕಾಲದಲ್ಲಿ ಬಳಸಿರುವುದನ್ನು ಕಾಣಬಹುದಾಗಿದ್ದು, ಅಂದರೆ ಇದು ಒಕ್ಕಲುತನದ ಭೂಮಿಯ ಒಂದು ನಿಶ್ಚಿತ ಪ್ರಮಾಣ ಮಾಪಕವಾಗಿದೆ. ಅಗ್ಗಡಲಿನ ವೀರಗಲ್ಲಿನಲ್ಲಿ 200 ಮಾರುಭೂಮಿ ಎಂದಿದೆ. ಮಾರು ಎಂದರೆ ಕೈಗಳ ನಾಲ್ಕು ಮೊಳ ಉದ್ದ ಅಳತೆಯಾಗಿದೆ. ಹೆಂಜೂಳಿಗೆಯ ವೀರಗಲ್ಲಿನಲ್ಲಿ ನಾಲ್ಕು ಗುಳು ಎಂದಿದ್ದು ಇದೂ ಸಹ ಭೂಮಿಯ ಅಳತೆಯ ಮಾಪಕವಾಗಿದೆ. ಈ ರೀತಿಯಲ್ಲಿ ಕೆರೆ ನಿರ್ಮಾಣ ಮತ್ತು ಅಳತೆಯ ಮಾಪಕಗಳ ಉಲ್ಲೇಖಗಳು ಸಹ ವೀರಗಲ್ಲಿನಲ್ಲಿ ಶಾಸನದಲ್ಲಿ ದೊರೆಯವುದರಿಂದ ಸ್ಥಳೀಯ ಆರ್ಥಿಕತೆ ಬಗ್ಗೆ ತಿಳಿಯಬಹುದಾಗಿದೆ.

**ಸಮಾರೋಪ:** ಹಾಸನ ಜಿಲ್ಲೆಯ ಶಾಸನ ಸ್ಮಾರಕ ಶಿಲ್ಪಗಳ ಗಮನಿಸಿದಾಗ ಗಂಗರ ಅಡಳಿತ ಪ್ರಭಾವ ಪ್ರಾರಂಭಿಕವಾಗಿ ನೇರ ಮತ್ತು ಅವರ ಸಾಮಂತರ ಅಳ್ವಿಕೆಯ ಉಲ್ಲೇಖಗಳಿವೆ ಹಾಗೂ ಇವರ ಕಾಳಗದ ಪರವಾಗಿ ಭಾಗವಹಿಸಿದ ಯೋಧರಿಗೆ ದತ್ತಿ ನೀಡುತ್ತಿದ್ದ ಬಗ್ಗೆ ಮಾಹಿತಿ ದೊರೆತಿದೆ. ಇದೇ ಧಾನ ಪ್ರವೃತ್ತಿಯು ಹೊಯ್ಸಳರ ಮುಂದುವರೆಸಿದರ ಬಗ್ಗೆ ಬಹಳಷ್ಟು ಆಧಾರಗಳಿವೆ. ಅಲ್ಲದೇ ವೀರನ ನನೆಪಿನ ಮೂಲಕ ಕೆರೆಗಳ ನಿರ್ಮಾಣಗಳು ಇವರ ಸಾಮಾಜಿಕ ಕಳಕಳಿ ಹಾಗೂ ವೀರನ ಹೆಸರಿನಲ್ಲಿ ದೇವಾಲಯಗಳ ನಿರ್ಮಾಣ ಮಾಡಿರುವುದು ಇವರ ಧಾರ್ಮಿಕತೆಯ ಒಲುವಿನ ಬಗ್ಗೆ ತಿಳಿಸುತ್ತವೆ. ಹಾಗೂ ತನ್ನ ಸೇವಕರ ಮರಣಿಸಿದಾಗ ಅತನಿಗಾಗಿ ವೀರಗಲ್ಲು ಹಾಕಿಸಿರುವುದು ಹಾಗೂ ಅಣ್ಣ, ತಮ್ಮ ಹಾಗೂ ಮಡದಿಯರು ತಮ್ಮವರು ಮರಣಿಸಿದಾಗ ಹಾಕಿಸಿದ ವೀರಗಲ್ಲುಗಳಿಂದ ಅವರ ಬಾಂಧವ್ಯಗಳ ಗಟ್ಟಿತನವನ್ನು ಸಮಾಜಕ್ಕೆ ತೋರಿಸಿರುವುದನ್ನು ನಾವು ಕಾಣಬಹುದಾಗಿದೆ. ಆದರೆ ವಿಜಯನಗರ ಕಾಲ ಹಾಗೂ ನಂತರದ ಕಾಲದ ಶಾಸನಗಳು ಹಾಗೂ ಶಾಸನರಹಿತವಾದ ವೀರಗಲ್ಲುಗಳು ದೊರೆತಿವೆ. ಅದರೆ ಶಾಸನ ಸಹಿತವಾದ ವೀರಗಲ್ಲುಗಳು ದೊರೆತಿಲ್ಲವಾಗಿವೆ. ಬಹುಶಃ ಯಾವ ವೀರನಿಗೆ ಕೊಡುಗೆ ಅಥವಾ ದತ್ತಿಯು ದೊರೆತ್ತಿತ್ತೂ ಅತನಿಗ ಮಾತ್ರ ಶಾಸನಸಹಿತ ಸ್ಮಾರಕಶಿಲ್ಪ ಹಾಕಿಸಲು ಪ್ರಾಮುಖ್ಯತೆ ಕೊಟ್ಟಿರಬಹುದಾಗಿದೆ. ಕೂಡುಗೆ ಅಥವಾ ದತ್ತಿಯನ್ನು ಹೊರತಾದ ವೀರರಿಗೆ ಕೇವಲ ಶಾಸನರಹಿತವಾದ ಸ್ಮಾರಕ ಶಿಲ್ಪಗಳ ಹಾಕಿಸಿರಬಹುದಾಗಿದೆ. ಒಟ್ಟಾರಯಾಗಿ ಈ ಸ್ಮಾರಕ ಶಿಲ್ಪಗಳ ಅಧ್ಯಯನ ಅಂದಿನ ಸಮಾಜದ ಸಾಮಾನ್ಯ ಸ್ಥಿತಿಗತಿಗಳ ವಿವರಗಳನ್ನು ತಳಭಾಗದಿಂದ ತೋರಿಸುವ ಮುಖ್ಯ ಅಕರಗಳೇಂದೆ ಪರಿಗಣಿಸಬಹುದಾಗಿದೆ.

**ಅಕರಗ್ರಂಥಗಳು**


1. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪ್ರಕಾಶಕರು, ಡಿ.ವಿ.ಕೆ.ಮೂರ್ತಿ, ಮೈಸೂರು, 2010.
2. ಶ್ರೀನಿವಾಸ ರಿತ್ತಿ., ಕರ್ನಾಟಕ ಆಡಳಿತ ಪಾರಿಭಾಷಿಕ ಪದಕೋಶ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,
3. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. (ಕ್ರಿ.ಶ.450–1150), ಸಪ್ನ ಬುಕ್ ಹೌಸ್, 2008.
4. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–ಎಂಟು, ಮೈಸೂರು ವಿಶ್ವವಿದ್ಯಾನಿಲಯ, 1984.
5. ಬಾ.ರಾ.ಗೋಪಾಲ್., ಹಾಸನ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, 2010.
6. ಇತಿಹಾಸ ಮತು ಪುರಾತತ್ವ, ಮೈಸೂರು ವಿಶ್ವವಿದ್ಯಾನಿಲಯ, 2009.
7. ಕ್ಷೇತ್ರಕಾರ್ಯ ವರದಿ.